ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೆ.ಎನ್. ಫಣೀಂದ್ರ ಮತ್ತು

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೆ. ಸೋಮಶೇಖರ್

ಮಧುಕರ @ ಮಧು @ ಮಲ್ಲೇಶ -ವಿರುದ್ಧ ಕರ್ನಾಟಕ ರಾಜ್ಯ ವಿನೋಭಾ ನಗರ ಪೊಲೀಸ್ ಠಾಣೆ ಮೂಲಕ

ಕ್ರಿಮಿನಲ್ ಅಪೀಲು ಸಂಖ್ಯೆ.615/2013, ದಿನಾಂಕ 2 ನೇ ವೆಂಬರ್, 2018

ತೀರ್ಪು

ನ್ಯಾಯಮೂರ್ತಿ ಶ್ರೀ ಕೆ.ಎನ್. ಫಣೀಂದ್ರ:

ಮಾನ್ಯ ಸತ್ರ ನ್ಯಾಯಾಧೀಶರು, ಮೊದಲನೆಯ ತ್ವರಿತ ಅಧಿವಿಚಾರಣಾ ನ್ಯಾಯಾಲಯ, ಶಿವಮೊಗ್ಗ, ಇವರು ಬಾಧಿತ ಆರೋಪಿಸಂಖ್ಯೆ: 1 ವಿರುದ್ಧ ಭಾರತ ದಂಡ ಸಂಹಿತೆಯ 397 ನೇ ಪ್ರಕರಣವನ್ನು ಓದಿಕೊಳ್ಳುವುದರೊಂದಿಗೆ 302, 392 ನೇ ಪ್ರಕರಣದ ಅಡಿಯಲ್ಲಿನ ದಂಡನೀಯ ಅಪರಾಧಕ್ಕಾಗಿ ಅಪರಾಧದ ದೋಷಿ ಎಂದು ನಿರ್ಣಯಿಸಿ ದಂಡನೆಯಾಗಿ ಜೀವಾವಧಿ ಶಿಕ್ಷೆಯನ್ನು ಮತ್ತು ಕಾರವಾಸ ಶಿಕ್ಷೆಯೊಂದಿಗೆ ಭಾರತ ದಂಡ ಸಂಹಿತೆಯ 302 ನೇ ಪ್ರಕರಣದ ದಂಡನೀಯ ಅಪರಾಧಗಳ ಅಡಿಯಲ್ಲಿ ರೂ .10,000/- ಜುಲ್ಮಾನೆಯನ್ನು ಸಂದಾಯ ಮಾಡಬೇಕೆಂದು; ಮತ್ತು ಭಾರತ ದಂಡ ಸಂಹಿತೆಯ 397 ನೇ ಪ್ರಕರಣದ ಅಡಿಯಲ್ಲಿನ ದಂಡನೀಯ ಅಪರಾಧಗಳಿಗಾಗಿ 10 ವರ್ಷಗಳ ಅವಧಿಗಾಗಿ ಕಠಿಣ ಕಾರಾಗೃಹವಾಸದೊಂದಿಗೆ ರೂ. 10,000/-ಜುಲ್ಮಾನೆಯನ್ನು ಸಂದಾಯ ಮಾಡುವಂತೆ ಅಪರಾಧದ ನಿರ್ಣಯ ತೀರ್ಪನ್ನು ಹೊರಡಿಸಿರುವರು.ಇದರಿಂದ ಬಾಧಿತನಾದ ಆಪಾದಿತಸಂಖ್ಯೆ: 1 ಇವನು ತೀರ್ಪನ್ನು ಪ್ರಶ್ನಿಸಿ ಎಸ್.ಸಿ.ಸಂಖ್ಯೆ: 78/2012 ರಲ್ಲಿ ಸಲ್ಲಿಸಿದ ಅಪೀಲು ಇದಾಗಿದೆ.

2. ನಾವು ಅಪೀಲುದಾರರ ಪರವಾಗಿ ಶ್ರೀ ಆರ್.ಬಿ. ದೇಶಪಾಂಡೆಯವರ ಪರವಾಗಿ ಮಾನ್ಯ ವಕೀಲರಾದ ಶ್ರೀ ದಿನೇಶ್ ಕುಮಾರ್ ಕೆ. ರಾವ್ರವರು ಮಂಡಿಸಿದ ವಾದವನ್ನು ಮತ್ತು ಪ್ರತ್ಯರ್ಜಿನಾಗಿರುವ ರಾಜ್ಯದ ಪರವಾಗಿ ಮಾನ್ಯ D ರಾಜ್ಯ ಹೆಚ್ಚುವರಿ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಅವರು ಮಂಡಿಸಿದ ವಾದವನ್ನು ಆಲಿಸಿರುತ್ತೇವೆ.ನಾವು ಅಭಿಲೇಖಗಳನ್ನು ಬಹಳ ಜಾಗರೂಕತೆಯಿಂದ ಪರಿಶೀಲಿಸಿರುತ್ತೇವೆ.

3. ದಾಖಲೆಗಳಿಂದ ಹೊರಹೊಮ್ಮಿದ ಮೊಕದ್ದಮೆಯ ಸಂಕ್ಷಿಪ್ತ ವಾಸ್ತವಿಕ ಅಂಶಗಳು ಹೀಗಿದೆ:

3.1 ಬಸಮ್ಮ ಎಂಬ ಮಹಿಳೆಯು ಶಿವಮೊಗ್ಗ ನಗರದಲ್ಲಿರುವ ಮನೆ ನಂ:94, 2 ನೇ ಅಡ್ಡರಸ್ತೆ, 2 ನೇ ಮುಖ್ಯ ರಸ್ತೆ, ಶಿವ ನಿಲಯದಲ್ಲಿ ವಾಸವಾಗಿದ್ದರು.ಆಕೆಯ ಮಗನಾದ ಲಿಂಗರಾಜು ಗುಲ್ಬರ್ಗಾದ ಕೆನೆರಾ ಬ್ಯಾಂಕ್ನಲ್ಲಿ ಉಪ ಪ್ರಧಾನ ವ್ಯವಸ್ಥಾಪಕನಾಗಿ (ಡಿ.ಜಿ.ಎಂ) ಕಾರ್ಯ ನಿರ್ವಹಿಸುತ್ತಿದ್ದನು.ಸದರಿ ಮನೆಯಲ್ಲಿ, ಮೃತ ಬಸಮ್ಮನ ಜೊತೆ ಫಿರ್ಯಾದುದಾರರಾದ ಸ್ಮಿತಾ ಮತ್ತು ಆಕೆಯ ತಾಯಿ ಭಾರತಿ ಸಹಾ ವಾಸವಾಗಿದ್ದರು.ಸದರಿ ಸ್ಮಿತಾ ತಾನು ಪ್ರತಿದಿನ ಕಾಲೇಜಿಗೆ ಹೋಗುತ್ತಿರುವೆನೆಂದು ಹೇಳಿಕೆ ನೀಡಿರುತ್ತಾಳೆ.ದಿನಾಂಕ: 10.8.2011 ರಂದು ಫಿರ್ಯಾದುದಾರರ ತಾಯಿಯಾದ ಭಾರತಿಯವರು ಯಾವುದೋ ಧಾರ್ಮಿಕ ಸಮಾರಂಭದಲ್ಲಿ ಭಾಗವಹಿಸುವ ಸಲುವಾಗಿ ವಡೇರಹಳ್ಳಿಗೆ ಹೋದ ಕಾರಣದಿಂದ ಫಿರ್ಯಾದುದಾರಳಾದ ಸ್ಮಿತಾ ಮತ್ತು ಆಕೆಯ ಅಜ್ಜಿಯಾದ ಮೃತ ಬಸಮ್ಮ ಮನೆಯಲ್ಲಿಯೇ ಉಳಿದುಕೊಂಡಿದ್ದಳು.

3.2ದಿನಾಂಕ: 11.8.2011 ರಂದು ಬೆಳಗ್ಗೆ ಸುಮಾರು 7.30 ರ ಸಮಯದಲ್ಲಿ ಫಿರ್ಯಾದುದಾರಳಾದ ಸ್ಮಿತಾ ಕಾಲೇಜಿಗೆ ಹೋದಾಗ ಮತ್ತು ಮೃತ ಬಸಮ್ಮ ಸದರಿ ಮನೆಯಲ್ಲಿ ಒಬ್ಬಂಟಿಯಾಗಿ ಇರುವಾಗ ಮತ್ತು ಮೃತ ಬಸಮ್ಮನಿಗೆ ಅ ವಯಸ್ಸಾಗಿ ನಡೆಯಲು ಕೂಡ ಸಾಧ್ಯವಿಲ್ಲದಿರುವುದರಿಂದ, ಫಿರ್ಯಾದುದಾರಳಾದ ಸ್ಮಿತಾ ಕಾಲೇಜಿಗೆ ಹೋಗುವ ಮುನ್ನ ಮನೆಯನ್ನು ಹೊರಗಡೆಯಿಂದ ಬೀಗ ಹಾಕಿ, ಕೀಲಿಯನ್ನು ಮನೆಯ ಕಿಟಕಿಯ ಒಳಗೆ ಇರಿಸಿ ಕಾಲೇಜಿಗೆ ಹೋಗಿರುತ್ತಾಳೆ.ಅದೇ ದಿನ ಮಧ್ಯಾಹ್ನ ಸುಮಾರು 2 ಗಂಟೆಯ ಹೊತ್ತಿಗೆ ಆಕೆಯು ಕಾಲೇಜಿನಿಂದ ಮನೆಗೆ ಹಿಂದಿರುಗಿದಾಗ, ಕಿಟಕಿಯ ಒಳಗೆ ಇರಿಸಿದ್ದ ಕೀಲಿ ಕಾಣಿಯಾಗಿರುವುದನ್ನು ಗಮನಿಸುತ್ತಾಳೆ ಮತ್ತು ಮನೆಯ ಅಗುಳಿಯು ಹೊರಗಿನಿಂದ ಹಾಕಿರುವುದನ್ನು ಸಹಾ ಗಮನಿಸುತ್ತಾಳೆ.ಮನೆಯ

ಅಗುಳಿಯನ್ನು ತೆಗೆದು ಮನೆಯ ಒಳಗೆ ಹೋದಾಗ ಬಸಮ್ಮ ಹಾಸಿಗೆಯ ಮೇಲೆ ಮಲಗಿರುತ್ತಾಳೆ ಮತ್ತು ಆಕೆ ಎಷ್ಟೇ ಪ್ರಯತ್ನ ಪಟ್ಟರೂ ಸಹ ಬಸಮ್ಮನ ದೇಹದಲ್ಲಿ ಯಾವುದೇ ಚಲನೆ ಇರುವುದಿಲ್ಲ ಮತ್ತು ಮಾತೂ ಸಹ ಆಡುತ್ತಿರುವುದಿಲ್ಲ.ತಕ್ಷಣವೇ ಆಕೆ ತನ್ನ ತಂದೆಗೆ ಕರೆ ಮಾಡಿದ್ದು, ಆಕೆಯ ತಂದೆಯು ಬಸಮ್ಮನನ್ನು ಎಬ್ಬಿಸಲು ಪ್ರಯತ್ನ ಪಡುವಂತೆ ಆಕೆಗೆ ಸೂಚಿಸುತ್ತಾನೆ ಮತ್ತು ಎಷ್ಟೇ ಪ್ರಯತ್ನಪಟ್ಟರೂ ಫಿರ್ಯಾದುದಾರಳಿಗೆ ಬಸಮ್ಮನನ್ನು ಎಬ್ಬಿಸಲು ಸಾಧ್ಯವಾಗುವುದಿಲ್ಲ ಯಾಕೆಂದರೆ ಆ ಹೊತ್ತಿಗಾಗಲೇ ಬಸಮ್ಮ ಮರಣ ಹೊಂದಿರುತ್ತಾಳೆ.ತದನಂತರ, ಫಿರ್ಯಾದುದಾರಳ ಚಿಕ್ಕಮ್ಮ ಮತ್ತು ಇತರರು ಆ ಮನೆಗೆ ಬರುವರು ಮತ್ತು ಅವರೆಲ್ಲರಿಗೂ ಬಸಮ್ಮ ಮರಣ ಹೊಂದಿರುವುದು ದೃಢವಾಗುತ್ತದೆ.ಅವರೆಲ್ಲರಿಗೂ ಮೃತ ಬಸಮ್ಮಳ ಮೈಮೇಲಿದ್ದ ನಾಲ್ಕು ಚಿನ್ನದ ಬಳೆಗಳು, ಎರಡು ಎಳೆ ಚಿನ್ನದ ಸರ ಮತ್ತು ಒಂದು ಜೊತೆ ಕಿವಿಯೋಲೆ ಕಾಣೆಯಾಗಿರುವುದು ಸಹ ಗಮನಕ್ಕೆ ಬಂದಿರುತ್ತದೆ.ಅಲ್ಲದೆ ಅವರುಗಳು ಹಾಸಿಗೆ ಮೇಲಿನ ರಕ್ತದ ಕಲೆಗಳನ್ನು ಸಹ ಗಮನಿಸುತ್ತಾರೆ.ಅದರಿಂದ ಮೃತ ಬಸಮ್ಮಳ ಮೈಮೇಲಿದ್ದ ಮೇಲೆ ಹೇಳಲಾದ ಚಿನ್ನದ ಆಭರಣಗಳನ್ನು ದೋಚುವ ಸಲುವಾಗಿ ಯಾರೋ ಮನೆಯ ಬೀಗವನ್ನು ತೆಗೆದು, ಮನೆಗೆ ನುಗ್ಗಿ, ಬಸಮ್ಮಳನ್ನು ಕೊಲೆ ಮಾಡಿರಬಹುದು ಎಂದು ಫಿರ್ಯಾದುದಾರಳ ಅನುಮಾನವನ್ನು ವ್ಯಕ್ತಪಡಿಸಿರುತ್ತಾಳೆ.ಈ ಎಲ್ಲಾ ಆರೋಪಗಳ ಮೇಲೆ, ಪ್ರಾ.ಸಾ .2 ಆಗಿರುವ ಫಿರ್ಯಾದುದಾರಳಾದ ಸ್ಮಿತಾ, ಶಿವಮೊಗ್ಗ ನಗರದ ವಿನೋಭಾನಗರ ಪೊಲೀಸ್ ಠಾಣೆಗೆ ದೂರನ್ನು ಸಲ್ಲಿಸಿರುತ್ತಾಳೆ.ಪೊಲೀಸರು, ಭಾರತ ದಂಡ ಸಂಹಿತೆಯ 397 ಮತ್ತು 302 ನೇ ಪ್ರಕರಣದ ದಂಡನೀಯ ಅಪರಾಧಗಳ ಅಡಿಯಲ್ಲಿ ದೂರನ್ನು ಅಪರಾಧ ಮೊಕದ್ದಮೆಸಂಖ್ಯೆ: 127/2011 ಅನ್ನು ದಾಖಲು ಮಾಡಿಕೊಂಡು ವಿಚಾರಣೆಯನ್ನು ಕೈಗೆತ್ತಿಕೊಂಡಿರುತ್ತಾರೆ.

3.3. ಸಮಗ್ರ ವಿಚಾರಣೆಯ ನಂತರ, ಪೊಲೀಸರು ಇಬ್ಬರು ಆಪಾದಿತರ ವಿರುದ್ಧ ದೋಷಾರೋಪಣ ಪಟ್ಟಿಯನ್ನು ಸಲ್ಲಿಸುತ್ತಾರೆ.ಆಪಾದಿತಸಂಖ್ಯೆ: 1 ಮಧುಕರ ಮತ್ತು ಆಪಾದಿತಸಂಖ್ಯೆ: 2 ಮಲ್ಯಪ್ಪರನ್ನು ಬಂಧಿಸಿ ನ್ಯಾಯಾಲಯದ ಮುಂದೆ 0 ಹಾಜರುಪಡಿಸಲಾಗಿದೆ ಮತ್ತು ಆಪಾದಿತರ ಹಾಜರಾತಿಯನ್ನು ನಿಶ್ಚಿತ ಪಡಿಸಿಕೊಂಡ ನಂತರ, ಮಾನ್ಯ ಅಧಿವಿಚಾರಣಾ ನ್ಯಾಯಾಧೀಶರು ಸದರಿ ಅಪರಾಧಕ್ಕಾಗಿ ಅಪರಾಧಿಗಳ ವಿರುದ್ಧ ಮಂಡಿಸಿದ ದೋಷಾರೋಪವನ್ನು ಮತ್ತು ಅಪರಾಧಿಗಳ ಅಧಿವಿಚಾರಣೆಯನ್ನು ಪ್ರಾರಂಭಿಸಿರುವರು.

3.4.ತಪ್ಪಿತಸ್ಥ ಆಪಾದಿತರ ಆರೋಪವನ್ನು ರುಜುವಾತುಪಡಿಸುವ ಸಲುವಾಗಿ, ಪ್ರಾಸಿಕ್ಯೂಷನ್ ಪ್ರಾ.ಸಾ .1 ರಿಂದ 23 ರವರ ವರೆಗೆ ಸರಿಸುಮಾರು 23 ಸಾಕ್ಷಿಗಳನ್ನು ವಿಚಾರಣೆ ಮಾಡಿದೆ ಮತ್ತು ನಿಶಾನೆ ಪಿ .1 ರಿಂದ ಪಿ .30 ರ ವರೆಗಿನ 30 ದಸ್ತಾವೇಜುಗಳನ್ನು ಗುರುತು ಮಾಡಿದೆ ಮತ್ತು ಪಾಟೀ ಸವಾಲಿನ ಸಂದರ್ಭದಲ್ಲಿ ಪ್ರತಿವಾದಿ ಸಾಕ್ಷಿಗಳಾದ ನಿಶಾನೆ ಪ್ರ .1 ಮತ್ತು ಪ್ರ .2 ನ್ನು ಸಹ ಗುರುತು ಮಾಡಿದೆ.ತನಿಖಾಧಿಕಾರಿಯು, ಪಾಟೀ ಸವಾಲಿನ ಸಂದರ್ಭದಲ್ಲಿ ನಿಶಾನೆ ಪ್ರ .3 ಪುನರ್ವಿಚಾರಣೆ ಅರ್ಜಿಯನ್ನು ಗುರುತು ಮಾಡಿರುವರು.ಮುದ್ದೆ ಮಾಲುಗಳನ್ನು ಸಹಾ ಮು.ಮಾ.1 ರಿಂದ 12 ಎಂದು ಗುರುತು ಮಾಡಿರುವರು.ಪ್ರಾಸಿಕ್ಯೂಷನ್ ಸಾಕ್ಷಿಗಳ ವಿಚಾರಣೆಯು ಮುಕ್ತಾಯವಾದ ನಂತರ, ಆಪಾದಿತನ್ನು ವಿಚಾರಣೆ ಮಾಡಲಾಯಿತು ಮತ್ತು ದಂಡ ಪ್ರಕ್ರಿಯಾ ಸಂಹಿತೆಯ 313 ನೇ ಪ್ರಕರಣದ ಅಡಿಯಲ್ಲಿ ಆತನ ಹೇಳಿಕೆಯನ್ನು ಅಭಿಲೇಖಿಸಲಾಯಿತು.ಆರೋಪಿಗಳು ಪ್ರಾಸಿಕ್ಯೂಷನ್ನಿನ ಮೊಕದ್ದಮೆಯನ್ನು ಸಂಪೂರ್ಣವಾಗಿ ಅಲ್ಲಗೆಳೆಯುವುದನ್ನು ಹೊರತುಪಡಿಸಿ ಯಾವುದೇ ವಿಶೇಷವಾದ ಪ್ರತಿವಾದವನ್ನು ಆರೋಪಿಗಳು ಹೊಂದಿರುವುದಿಲ್ಲ.ಆರೋಪಿಗಳು ಅಂಥ ಯಾವುದೇ ಪ್ರತಿವಾದಿ ಸಾಕ್ಷ್ಯಗಳನ್ನು ಹಾಜರುಪಡಿಸಿರುವುದಿಲ್ಲ.ಆಪಾದಿತನ ಪರವಾಗಿ ಮಾನ್ಯ ವಕೀಲರು, ಮತ್ತು ಮಾನ್ಯ ಪಬ್ಲಿಕ್ ಪ್ರಾಸಿಕ್ಯೂಟರ್ ಅವರು ಮಂಡಿಸಿದ ವಾದವನ್ನು ಆಲಿಸಿದ ನಂತರ, ಅಧಿವಿಚಾರಣಾ ನ್ಯಾಯಾಲಯವು ಆಪಾದಿತ 1 ರ ವಿರುದ್ಧ ನಿರ್ಣೀತ ದೋಷಿ ಎಂಬ ತೀರ್ಪನ್ನು ಮತ್ತು ಸೆರೆವಾಸದ ದಂಡನೆಯ ಐತೀರ್ಪನ್ನು ನೀಡಿದೆ ಮತ್ತು ಮೇಲಿನ ಸದರಿ ದೋಷಾರೋಪಗಳಿಂದ ಆಪಾದಿತಸಂಖ್ಯೆ: 2 ಅನ್ನು ಖುಲಾಸೆಗೊಳಿಸಿದೆ.

4. ನಾವು ಅಭಿಲೇಖಿಸಿದ ಲಭ್ಯ ಸಾಕ್ಷ್ಯಾಧಾರಗಳನ್ನು ಮತ್ತೊಮ್ಮೆ ಬಹಳ ಜಾಗರೂಕತೆಯಿಂದ ಪುನರ್ ಮೌಲೀಕರಣಕ್ಕೊಳಪಡಿಸಿರುತ್ತೇವೆ.ವಾಸ್ತವವಾಗಿ ಅಪೀಲುದಾರರ ಪರವಾಗಿ ಮಾನ್ಯ ವಕೀಲರು ಹಾಗೆಯೇ ಸರ್ಕಾರದ ಪರವಾಗಿ ಮಾನ್ಯ ಹೆಚ್ಚುವರಿ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಅವರ ಉಪಸ್ಥಿತಿಯಲ್ಲಿ ಬಹಿರಂಗ ನ್ಯಾಯಾಲಯದಲ್ಲಿ ಪ್ರದರ್ಶಿಸಲಾದ ನಿಶಾನೆ ಪಿ .28 ಗುರುತು ಮಾಡಲಾದ ವಿಡಿಯೋ ಸಿಡಿ ಯನ್ನು ನಾವು ಸಹ ವೀಕ್ಷಿಸಿದ್ದೇವೆ.

5. ಈ ನ್ಯಾಯಾಲಯದ ಮುಂದೆ, ಅಪೀಲುದಾರರ ಪರ ಮಾನ್ಯ ವಕೀಲರು ಬಹು ನಿಷ್ಕರವಾಗಿ ಮಂಡಿಸಿದ ವಾದವೇನೆಂದರೆ, ಈ ಮೊಕದ್ದಮೆಯು ಸಾಂದರ್ಭಿಕ ಸಾಕ್ಷಿಯ ಮೊಕದ್ದಮೆಯಾಗಿದೆ.ಪ್ರಾಸಿಕ್ಯೂಷನ್, ಸಮಂಜಸ ಸಂದೇಹಾತೀತವಾಗಿ ಎಲ್ಲಾ ಸನ್ನಿವೇಶ ಸಂಗತಿಗಳನ್ನು ಸಾಕ್ಷ್ಯಸಮೇತ ರುಜುವಾತು ಬೇಕೆಂಬುದು ಅವರ ವಾದಾಂಶವಾಗಿದೆ.ಇಡೀ ಮೊಕದ್ದಮೆಯು ಹಲವು ಸನ್ನಿವೇಶಗಳಿಂದ ಆವರಿಸಿಕೊಂಡಿದೆ.ನಿರ್ದಿಷ್ಟವಾಗಿ ಆರೋಪಿಯ ವರ್ತನೆ ಮತ್ತು ವಶ ಪಡಿಸಿಕೊಳ್ಳಲಾದ ಚಿನ್ನದ ಆಭರಣಗಳನ್ನು ಮೃತರ ರಕ್ತ ಸಂಬಂಧಿಗಳಿಂದ ಆ ಚಿನ್ನದ ಆಭರಣಗಳು ಮೃತಳ ಆಭರಣಗಳೆಂದು ಗುರುತಿಸಲಾಗಿರುತ್ತವೆ.ಈ ಕಾರ್ಯಗಳೆಲ್ಲವು ಸ್ವಲ್ಪ ಮಟ್ಟಿಗೆ ಪ್ರೇರಕ ಘಟಕಾಂಶಗಳಾಗಿವೆ.ಮಾನ್ಯ ನ್ಯಾಯವಾದಿ ತಮ್ಮ ವಾದಾಂಶವನ್ನು ಮುಂದುವರೆಸಿ, ನ್ಯಾಯಾಲಯದ ಮುಂದೆ ಪ್ರಾಸಿಕ್ಯೂಷನ್ ಅವರು ಮಂಡಿಸಿದ ಆ ಯಾವುದೇ ಸನ್ನಿವೇಶ ಸಂಗತಿಗಳನ್ನು ಸಮಂಜಸ ಸಂದೇಹಾತೀತವಾಗಿ ರುಜುವಾತು ಪಡಿಸಿರುವುದಿಲ್ಲವೆಂದಿದ್ದಾರೆ.ಆಪಾದಿತನು ಯಾವುದೇ ವಿಶೇಷ ಪ್ರತಿವಾದ ಹೊಂದಿಲ್ಲ.ಆದರೂ, ಪ್ರಾಸಿಕ್ಯೂಷನ್ ತಾನು ಮಂಡಿಸುವ ವಾದದಿಂದಲೇ ಅದು ಗೆಲ್ಲಬಹುದು ಅಥವಾ ಸೋಲಬಹುದಾಗಿದೆ.ಪ್ರಾಸಿಕ್ಯೂಷನ್ ಸಮಂಜಸ ಸಂದೇಹಾತೀತವಾಗಿ ತನ್ನ ವಾದವನ್ನು ರುಜುವಾತು ಪಡಿಸದ ಹೊರತು, ಯಾರೇ ಆರೋಪಿಯು ಯಾವುದೇ ಪ್ರತಿವಾದವನ್ನು ಅಥವಾ ಯಾವುದೆಲ್ಲ ಪ್ರತಿವಾದವನ್ನಾಗಿ ತೆಗೆದುಕೊಳ್ಳುವ ಹೊಣೆಗಾರಿಕೆಯನ್ನು ಹೊಂದಿರುವುದಿಲ್ಲ.ನ್ಯಾಯಾಲಯದ ಮುಂದೆ ನ್ಯಾಯವಾದಿಯವರು ತಮ್ಮ ವಾದವನ್ನು ಮುಂದುವರೆಸಿ, ಪ್ರಾಸಿಕ್ಯೂಷನ್ ಈಗಾಗಲೇ ಹೇಳಿರುವ ಆಪಾದಿತನಿಂದ ವಶಪಡಿಸಿಕೊಂಡದ್ದು ಎಂಬ ವಿಷಯದ ಸಂಬಂಧದಲ್ಲಿ ಪ್ರಾಸಿಕ್ಯೂಷನ್ ಸುಳ್ಳು ಹೇಳಿದೆ ಮತ್ತು ಅದನ್ನು 0 ಸೃಜಿಸಿದೆ ಮತ್ತು ಮಾನ್ಯ ಅಧಿವಿಚಾರಣಾ ನ್ಯಾಯಾಧೀಶರು ಪ್ರಾ.ಸಾ .2 ಮತ್ತು 3 ರ ಸಾಕ್ಷ್ಯಕ್ಕೆ ಉಲ್ಲೇಖಿಸುವುದರೊಂದಿಗೆ ವಶಪಡಿಸಿಕೊಂಡ ಸಾಕ್ಷಿಗಳ ಸಾಕ್ಷ್ಯವನ್ನು ಪರಿಗಣಿಸಿರುವುದಿಲ್ಲ ಎಂದು ವಾದಾಂಶವನ್ನು ಮಂಡಿಸಿರುವರು.

6. ಪ್ರಾಸಿಕ್ಯೂಷನ್ ವಿವಿಧ ಸಾಕ್ಷಿದಾರರುಗಳ ಮುಖಾಂತರ ಅದರಲ್ಲೂ ನಿರ್ದಿಷ್ಟವಾಗಿ ಪ್ರಾ.ಸಾ. 6 ಮತ್ತು 7 ರ ಸಾಕ್ಷ್ಯಗಳ ಮತ್ತು ಪ್ರಾ.ಸಾ. 14, 15 ಮತ್ತು 16 ರ ಆಧಾರದ ಮೇಲೆ ಆಪಾದಿತನ ಚಲನವಲನಕ್ಕೆ ಸಂಬಂಧಪಟ್ಟಂತೆ ಅಧಿವಿಚಾರಣಾ ನ್ಯಾಯಾಲಯವು ಸಮರ್ಪಕವಾಗಿ ವಿವೇಚಿಸಿರುವುದಿಲ್ಲ.ವಶಪಡಿಸಿಕೊಂಡ ಸಂದರ್ಭದಲ್ಲಿನ ಸಾಕ್ಷಿದಾರರುಗಳಿಂದ ಸಾಕ್ಷ್ಯದ ಸತ್ಯಾಸತ್ಯತೆಯನ್ನು ಖಚಿತಪಡಿಸಿಕೊಳ್ಳುವುದಕೋಸ್ಕರ ನ್ಯಾಯಾಲಯದ ಮುಂದೆ ಹಾಜರು ಪಡಿಸಿದ ಅಡಕ ತಟ್ಟೆಯನ್ನು (ಸಿ.ಡಿ) ಅಧಿವಿಚಾರಣಾ ನ್ಯಾಯಾಲಯವು ವೀಕ್ಷಿಸಿರುವುದಿಲ್ಲ.

ಮಾನ್ಯ ವಕೀಲರು ತಮ್ಮ ವಾದವನ್ನು ಮುಂದುವರೆಸಿ, ಯಾರೋ ಬೇರೊಬ್ಬರು ಅಪರಾಧವನ್ನು ಎಸಗಿರುವ ಸಂಭವವಿದೆ ಮತ್ತು ಆಪಾದಿತನನ್ನು ತಪ್ಪಾಗಿ ದೋಷಾರೋಪಣೆಯಲ್ಲಿ ಸಿಕ್ಕಿಸುವ ಉದ್ದೇಶದಿಂದ, ಮೃತರ ರಕ್ತ ಸಂಬಂಧಿಗಳ ನೆರವಿನೊಂದಿಗೆ ದುರುದ್ದೇಶಪೂರ್ವಕವಾಗಿಯೇ ವಶಪಡಿಸಿಕೊಂಡ ಪ್ರಕ್ರಿಯೆಯನ್ನು ಮಾಡಲಾಗಿದೆ.ಆದ್ದರಿಂದ, ಈ ನ್ಯಾಯಾಲಯವು ಈ ಸಂಬಂಧದಲ್ಲಿ ಅಭಿಲೇಖಿಸಿದ ಸಾಕ್ಷ್ಯಗಳನ್ನು ಮರುಮೌಲ್ಯೀಕರಿಸುವ ಮೂಲಕ ಈ ನ್ಯಾಯಾಲಯ ಹಸ್ತಕ್ಷೇಪ ಮಾಡಬೇಕೆಂಬುದು ಮಾನ್ಯ ನ್ಯಾಯವಾದಿಗಳ ವಾದವಾಗಿದೆ.

7. ಇದಕ್ಕೆ ವಿರುದ್ಧವಾಗಿ, ಮಾನ್ಯ ಹೆಚ್ಚುವರಿ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಮಂಡಿಸಿದ ಕಠಿಣತಮ ನಿವೇದನೆ ಹೀಗಿದೆ.ಪ್ರಾ.ಸಾ .2 ಮತ್ತು ಇತರೆ ಸಾಕ್ಷಿದಾರರು ಸಾಕ್ಷ್ಯಗಳಲ್ಲಿ ವ್ಯತ್ಯಾಸವಿದ್ದರೂ ಸಹ ವಶಪಡಿಸಿಕೊಂಡ ಸಂಬಂಧದಲ್ಲಿ ಅವುಗಳು ಪ್ರಾಸಿಕ್ಯೂಷನ್ ಮೊಕದ್ದಮೆಗೆ ಪೂರಕವಾಗಿದೆ ಮತ್ತು ಘಟನೆ ಸಂಭವಿಸಿದ ಆ ಕೂಡಲೇ ಮತ್ತು ಆಪಾದಿತನ ನಡವಳಿಕೆಯು ಸಹ ಪ್ರಾಸಿಕ್ಯೂಷನ್ ಮೊಕದ್ದಮೆಗೆ ಪೂರಕವಾಗಿದೆ.ಆ ಎಲ್ಲ ವ್ಯತ್ಯಾಸಗಳು ಸಣ್ಣ ಪ್ರಮಾಣದ ವ್ಯತ್ಯಾಸಗಳಾಗಿವೆ ಮತ್ತು ಈ ವ್ಯತ್ಯಾಸಗಳನ್ನು ಪ್ರಾಸಿಕ್ಯೂಷನ್ ಮೊಕದ್ದಮೆಯನ್ನು ಒಟ್ಟಾರೆಯಾಗಿ ಬುಡಮೇಲುಗೊಳಿಸಲು ಸಾಧ್ಯವಿಲ್ಲ.ವಶಪಡಿಸಿಕೊಂಡ ಸಾಕ್ಷ್ಯಗಳ ಉಲ್ಲೇಖದೊಂದಿಗೆ ಪ್ರಾಸಿಕ್ಯೂಷನ್ ಸಾಕ್ಷಿದಾರರ ಸಾಕ್ಷ್ಯದ ಮುಖಾಂತರ ಮತ್ತೊಮ್ಮೆ ವಿಚಾರಣೆಗೆ ಒಳಪಡಿಸಲು ಮತ್ತು ನ್ಯಾಯಾಲಯಕ್ಕೆ ಮತ್ತೊಮ್ಮೆ ಮನವರಿಕೆ ಮಾಡಿಕೊಡಲು ಪ್ರಯತ್ನಿಸಿರುವುದನ್ನು ನಿವೇದಿಸಿ ಮತ್ತು ಅಂಥ ವ್ಯತ್ಯಾಸಗಳ ಸಂಬಂಧದಲ್ಲಿ ಅಧಿವಿಚಾರಣಾ ನ್ಯಾಯಾಲಯವು ನಡೆಸಿದ ಪ್ರಾಸಿಕ್ಯೂಷನ್ ಸಾಕ್ಷಿದಾರರ ಸಾಕ್ಷ್ಯದ ಆಧಾರದ ಮೇಲೆ ಈ ನ್ಯಾಯಾಲಯವು ಅವಲ ೦ ಬಿತವಾಗಿದೆ.ನ್ಯಾಯವಾದಿಗಳು ವಾದಾಂಶವನ್ನು ಮುಂದುವರೆಸುತ್ತಾ, ಈ ನ್ಯಾಯಾಲಯದ ಮುಂದೆ ಆರೋಪಿಯ ಪರ ನ್ಯಾಯವಾದಿಗಳು ಎತ್ತಿದ ಎಲ್ಲಾ ವಸ್ತುವಿಷಯಗಳ ಅಂಶಗಳನ್ನು ಅಧಿವಿಚಾರಣಾ ನ್ಯಾಯಾಲಯವು ಪರಿಗಣಿಸಿದೆ ಈ ವಸ್ತು ವಿಷಯದಲ್ಲಿ

ಹಸ್ತಕ್ಷೇಪ ಮಾಡುವುದಕ್ಕೆ ಯಾವುದೇ ಅವಕಾಶವಿರುವುದಿಲ್ಲವೆಂದೂ ಸಹ ನಿವೇದಿಸಿರುವರು.ಹಾಗಾಗಿ, ಮಾನ್ಯ ಹೆಚ್ಚುವರಿ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಈ ಅಪೀಲನ್ನು ವಜಾಗೊಳಿಸಬೇಕೆಂದು ನಿವೇದಿಸಿಕೊಂಡಿರುವರು.

8. ಮೇಲೆ ಹೇಳಲಾದ ಸದರಿ ಪ್ರತಿಸ್ಪರ್ಧಿಗಳು ಮಂಡಿಸಿದ ವಾದದ ಆಧಾರದ ಮೇಲೆ, ನಮ್ಮ ಪರಿಗಣನೆಗಾಗಿ ಉದ್ಭವಿಸುವ ಅಂಶಗಳು ಹೀಗಿವೆ:

(1) ಭಾರತ ದಂಡ ಸಂಹಿತೆಯ 302 ಮತ್ತು 397 ನೇ ಪ್ರಕರಣದ ಅಡಿಯಲ್ಲಿ ದಂಡನೀಯ ಅಪರಾಧಕ್ಕಾಗಿ ಆಪಾದಿತನು ತಪ್ಪಿತಸ್ಥ ಎಂಬುದನ್ನು ಸಮಂಜಸ ಸಂದೇಹಾತೀತವಾಗಿ ಪ್ರಾಸಿಕ್ಯೂಷನ್ ರುಜುವಾತುಪಡಿಸಿದೆಯೇ?

(2) ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ಶಿಕ್ಷೆಯು ಯುಕ್ತವಾಗಿದೆಯೇ ಮತ್ತು ಸರಿಯಾಗಿದೆಯೇ?

ಈ ಮೊಕದ್ದಮೆಯಲ್ಲಿ ಪ್ರಾಸಿಕ್ಯೂಷನ್ ಮೊಕದ್ದಮೆಯು ವಿವಿಧ ಸಂಗತಿ ಸನ್ನಿವೇಶಗಳ ಸುತ್ತ ಸುತ್ತುತ್ತಿದೆ.

9. ನಾವು, ಈ ಸಾಂದರ್ಭಿಕ ಸಾಕ್ಷ್ಯಗಳ ಮೊಕದ್ದಮೆಯಲ್ಲಿ, ಕಾನೂನಿನ ಸ್ಥಿತಿಯ ಬಗೆಗೆ ಅರಿತುಕೊಂಡಿದ್ದೇವೆ.ಪ್ರಾಸಿಕ್ಯೂಷನ್ ಯಾವೆಲ್ಲಾ ಸಂಗತಿಗಳನ್ನು ಎತ್ತಿ ಹೇಳಿರುವರೋ, ಅವಲಂಬಿಸಿರುವರೋ ಮತ್ತು ಆ ಎಲ್ಲಾ ಸಂಗತಿಗಳನ್ನು ಸಮರ್ಥವಾಗಿ ರುಜುವಾತುಪಡಿಸಿರುವರೇ ಮತ್ತು ಆಪಾದಿತನ ವಿರುದ್ಧದ ಅನುಮಾನದ ತಪ್ಪಿತಸ್ಥದ ಬಗ್ಗೆ ಗಮನ ಸೆಳೆಯಲು ಪೂರ್ಣ ಸಂಗತಿಯ ಸರಣಿಯನ್ನು ೧ ರುಜುವಾತುಪಡಿಸಿರುವರೇ ಎಂಬ ಅಂಶಗಳ ಕಡೆಗೆ ಗಮನ ನೀಡಬೇಕಾಗುತ್ತದೆ.

10. ಈ ನಿರ್ದಿಷ್ಟ ಮೊಕದ್ದಮೆಯಲ್ಲಿ, ಪ್ರಾಸಿಕ್ಯೂಷನ್ ಅವಲಂಬಿಸಿರುವ ಸಂಗತಿಗಳನ್ನು ಈ ಮುಂದಿನಂತೆ ಸ್ಥೂಲವಾಗಿ ವರ್ಗೀಕರಿಸಲಾಗಿದೆ:

(1) ಮೃತಪಟ್ಟ ವ್ಯಕ್ತಿಯ ಮರಣವು ನರಹತ್ಯೆಯಿಂದ ಉಂಟಾದ ಸಾವು;

( 2) ಆಪಾದಿತ ಸ ಂ ಖ್ಯೆ:1 ನಿ ಂ ದ ವಶಪಡಿಸಿಕೊ ಂ ಡ ಆರೋಪಕ್ಕೊಳಪಟ್ಟ ವಸ್ತುಗಳು;

( 3) ವಶಪಡಿಸಿಕೊಂಡ ಆಭರಣಗಳು ಮೃತರ ಸಂಬಂಧಿಕರು ಗುರುತಿಸಿದ ಚಿನ್ನದ ಆಭರಣಗಳು;

( 4) ಘಟನೆಯ ಮುಂಚೆ ಮತ್ತು ನಂತರದಲ್ಲಿನ ಆಪಾದಿತನ ನಡವಳಿಕೆಗಳು ಅಥವಾ ಚಲನವಲನಗಳು ಮತ್ತು ಕೊನೆಯದಾಗಿ;

( 5) ಉದ್ದೇಶ.

ಈಗ ನಾವು, ಮೇಲೆ ಹೇಳಲಾದ ಸದರಿ ಅಂಶಗಳನ್ನು ಒಂದೊಂದಾಗಿ ಪರಿಗಣಿಸೋಣ;

11. ( 1) ಮತ್ತು ( 3) ನೇ ಅಂಶಗಳು ಮೃತರ ಮರಣವು ನರಹತ್ಯೆಯಿಂದಾಗಿದೆ ಮತ್ತು ಮೃತರ ಸಂಬಂಧಿಕರಿಂದ ಗುರುತಿಸಲ್ಪಟ್ಟ ಮೃತರ ಚಿನ್ನದ ಆಭರಣಗಳು:

ಅನುಕೂಲದ ಉದ್ದೇಶಕ್ಕಾಗಿ ನಮಗೆ ( 1) ಮತ್ತು ( 3) ನೇ ಸಂಗತಿ ಸನ್ನಿವೇಶಗಳನ್ನು ಒಟ್ಟಿಗೆ ಪರಿಗಣನೆಗೆ ತೆಗೆದುಕೊಂಡಾಗ ಅದರಲ್ಲಿ ಸಂಬಂಧಪಟ್ಟ ಎರಡೂ ದೃಷ್ಟಿಕೋನದಿಂದ ಯಾವುದೇ ರೀತಿಯ ವಿವಾದವು ಕಂಡುಬರುವುದಿಲ್ಲ.ಪ್ರಾಸಿಕ್ಯೂಷನ್ ಮೃತ ಮರಣವು ನರಹತ್ಯೆಯ ಸಾವೆಂದು ರುಜುವಾತು ಪಡಿಸಿದೆ.ಶವ ಮಹಜರು ನಿಶಾನೆ ಪಿ .7, ಮರಣೋತ್ತರ ಪರೀಕ್ಷೆಯ ವರದಿ-ನಿಶಾನೆ ಪಿ .13 ಮತ್ತು ಶವ ಮಹಜರು ಮಾಡುವ ಸಮಯದಲ್ಲಿ ಪಂಚನಾಗಿದ್ದಂತಹ ಪ್ರಾ.ಸಾ .5 ರ ಸಾಕ್ಷ್ಯ ಲ್ಯು ಮತ್ತು ವೈದ್ಯರು ಪ್ರಾ.ಸಾ .2 ಮತ್ತು ಮೃತದೇಹವನ್ನು 0 ನೋಡಿದ ಇತರೆ ಸಾಕ್ಷಿಗಳು ಅಂದರೆ ಪ್ರಾ.ಸಾ .1, 2, ಮತ್ತು 3 ಮೃತರ ಸಂಬಂಧಿಕರು ಮತ್ತು ಅನಿತ ಪ್ರಾ.ಸಾ .9 ಎಲ್ಲರೂ ಸಹ ಮೃತರ ಮರಣದ ಬಗ್ಗೆ ಮತ್ತು ಮೃತರ ಕುತ್ತಿಗೆಯ ಗಾಯದ ಬಗ್ಗೆ ನಿಖರವಾದ ಹೇಳಿಕೆಯನ್ನು ನೀಡಿರುತ್ತಾರೆ.ಮರಣೋತ್ತರ ಪರೀಕ್ಷೆಯ ವರದಿಯಲ್ಲಿ ಮರಣವು ಕುತ್ತಿಗೆಯನ್ನು ಹಿಸುಕಿ ಉಸಿರು ಕಟ್ಟಿಸುವ ಮೂಲಕ ಸಂಭವಿಸಿದೆ ಎಂದು ಸ್ಪಷ್ಟವಾಗಿ ತಿಳಿಯಪಡಿಸುತ್ತದೆ.ಆದ್ದರಿಂದ, ಪ್ರಾಸಿಕ್ಯೂಷನ್ ಅಭಿಲೇಖದಲ್ಲಿರುವ ಮೇಲಿನ ಸದರಿ ವಸ್ತು ವಿಷಯಗಳು ಮತ್ತು ಮೃತರ ಮೃತದೇಹದ ಮೇಲಿನ ಗಾಯಗಳು

ಸಹ ಅದನ್ನು ಸುಸ್ಥಾಪಿತಗೊಳಿಸುತ್ತದೆ.ಆದುದರಿಂದ ಮರಣವು ಮೃತರ ನರಹತ್ಯೆ ಸಾವಾಗಿದೆ ಎಂಬುದನ್ನು ಸಹ ನಿಖರವಾಗಿ ಪ್ರಾಸಿಕ್ಯೂಷನ್ ಸುಸ್ಥಾಪಿತಗೊಳಿಸಿರುವರು.

12. ಸಂಬಂಧಪಟ್ಟ ವಸ್ತುಗಳನ್ನು ಆದಷ್ಟು ಮಟ್ಟಿಗೆ ಗುರುತಿಸಲಾಗಿದೆ.ಮೃತಳ ಮರಣಕ್ಕೂ ಮುಂಚೆ ಅವಳು ಧರಿಸಿದ ವಸ್ತುಗಳ ಸಂಬಂಧದಲ್ಲಿ ಆಪಾದಿತನು, ವಾಸ್ತವವಾಗಿ ಅವನಿಗೆ ಸೇರಿದ ವಸ್ತುಗಳೆಂದು ಕ್ಲೇಮು ಮಾಡಿರುವುದಿಲ್ಲ ಅಥವಾ ಆ ವಸ್ತುಗಳನ್ನು ನಿರಾಕರಿಸಿರುವುದಿಲ್ಲ.ಸದರಿ ವಸ್ತುಗಳನ್ನು ಆಪಾದಿತನಿಂದ ವಶಪಡಿಸಿಕೊಂಡ ನಂತರ, ಆದಷ್ಟು ಬೇಗನೇ ಸದರಿ ವಸ್ತುಗಳನ್ನು ಪ್ರಾ.ಸಾ. ಮತ್ತು ಪ್ರಾ.ಸಾ .2 ನಿಖರವಾಗಿ ಗುರುತಿಸಿರುತ್ತಾರೆ.ಮುದ್ದೆ ಮಾಲು 3 ರಿಂದ 7 ಎಂದು ಗುರುತು ಮಾಡಲಾಗಿದೆ.ಅದನ್ನು ಈ ಮೊಕದ್ದಮೆಯಲ್ಲಿ ನ್ಯಾಯಾಲಯವು ಪ್ರಾ.ಸಾ .2 ರ ಪರವಾಗಿ ಸದರಿ ವಸ್ತುಗಳಿಗೆ ಸಂಬಂಧಿಸಿದಂತೆ, ಮಧ್ಯಕಾಲೀನ ಅಭಿರಕ್ಷೆಯನ್ನು ನೀಡಿ ಆದೇಶವನ್ನು ಹೊರಡಿಸಿರುತ್ತದೆ ಮತ್ತು ಆಪಾದಿತನು ಇದಕ್ಕೂ ಸಹ ಯಾವುದೇ ರೀತಿಯ ಆಕ್ಷೇಪವನ್ನು ವ್ಯಕ್ತಪಡಿಸಿರುವುದಿಲ್ಲ.ಆದ್ದರಿಂದ, ಪ್ರಾ.ಸಾ .1 ಮತ್ತು 2 ಮತ್ತು ಮನೆ ಕೆಲಸದವಳಾದ ಪ್ರಾ.ಸಾ .9 ಇವರು ನೀಡಿರುವ ಸಾಕ್ಷ್ಯದಲ್ಲಿ ಮೃತಳು ತನ್ನ ಜೀವಿತಾವಧಿಯ ಕಾಲದಲ್ಲಿ ಪ್ರತಿದಿನವೂ ಚಿನ್ನದ ಆಭರಣಗಳನ್ನು ಧರಿಸುತ್ತಿದ್ದಳು ಎಂಬುದನ್ನು ಬಹಳ ಸ್ಪಷ್ಟವಾಗಿ ಹೇಳಿಕೆ ನೀಡಿರುತ್ತಾರೆ ಮತ್ತು ಈ ಸಾಕ್ಷಿದಾರರು ಸದರಿ ಚಿನ್ನದ ಆಭರಣಗಳನ್ನು ಮೃತರ ಜೀವಿತಾವಧಿಯ ಸಮಯದಲ್ಲಿ ಆಕೆಯ ಮೈಮೇಲಿರುವುದನ್ನು ನೋಡಿರುವ ಪ್ರತ್ಯಕ್ಷ ಸಾಕ್ಷಿದಾರರಾಗಿರುತ್ತಾರೆ.ಮೃತಳ ಸಂಬಂಧಿಕರಿಗೆ ವಶಪಡಿಸಿಕೊಂಡ ಆಭರಣಗಳನ್ನು ತೋರಿಸಿದಾಗಲೂ ಸದರಿ ಆಭರಣಗಳು ಮೃತ ಬಸಮ್ಮಳಿಗೆ ಸೇರಿದ್ದು ಎಂಬುದನ್ನು ಬಹಳ ನಿಖರವಾಗಿ ಗುರುತಿಸಿರುತ್ತಾರೆ.ಅಷ್ಟೇ ಅಲ್ಲದೆ, ನ್ಯಾಯಾಲಯದ ಮುಂದೆ ಅಪೀಲುದಾರರ ಪರ ಮಾನ್ಯ ನ್ಯಾಯವಾದಿಗಳು ನಿವೇದಿಸಿದ ವಾದದಲ್ಲಿ ಮೃತ ಬಸಮ್ಮಳಿಗೆ ಸೇರಿದ ಆಭರಣಗಳನ್ನು ಗುರುತಿಸಿರುವ ಸಂಬಂಧದಲ್ಲಿ ಅಪೀಲುದಾರನಿಗೆ ಯಾವ ವಿವಾದವಿರುವುದಿಲ್ಲ.

ಆದರೆ ನ್ಯಾಯಾಲಯದ ಮುಂದೆ ಮಾನ್ಯ ನ್ಯಾಯವಾದಿಗಳು ಈ ಮೊಕದ್ದಮೆಯನ್ನು ಇತರ ಆಧಾರಗಳ ಮೇಲೆ ವಾದವನ್ನು ಮಂಡಿಸಿರುವರು.

13 ( 3) ವಶಪಡಿಸಿಕೊಳ್ಳುವಿಕೆ:ಈ ನ್ಯಾಯಾಲಯವು ಈಗ ಅತ್ಯಗತ್ಯವಾಗಿ ಪರಿಗಣಿಸಬೇಕಾದ ಬಹಳ ಪ್ರಮುಖ ಸಂಗತಿ ಎಂದರೆ ಆಪಾದಿತನಿಂದ ವಶಪಡಿಸಿಕೊಂಡ ಆಭರಣಗಳು ಆರೋಪಕ್ಕೊಳಪಟ್ಟ ಆಭರಣಗಳಾಗಿವೆ.ನಾವು ಮೊದಲು ಈ ನಿರ್ದಿಷ್ಟ ಅಂಶವನ್ನು ಗಮನಕ್ಕೆ ತೆಗೆದುಕೊಳ್ಳಬೇಕಾಗಿದೆ ಮತ್ತು ತದನಂತರದಲ್ಲಿ ಘಟನೆಯ ಪೂರ್ವದಲ್ಲಿ ಮತ್ತು ನಂತರದಲ್ಲಿ ಆರೋಪಿಯ ನಡಾವಳಿಯ ಸಂಬಂಧದಲ್ಲಿ ಚರ್ಚೆಯನ್ನು ಮಾಡಬೇಕಾಗಿದೆ.

14. ಪ್ರಾಸಿಕ್ಯೂಷನ್ ಈ ಸಂಬಂಧದಲ್ಲಿ, ಪ್ರಾ.ಸಾ .3, ಪ್ರಾ.ಸಾ .4, ಪ್ರಾ.ಸಾ .10 ಮತ್ತು ಪ್ರಾ.ಸಾ .23 ರ ಇವರ ಸಾಕ್ಷ್ಯಗಳ ಮೇಲೆ ಅವಲಂಬಿತವಾಗಿದೆ.ಆಪಾದಿತಸಂಖ್ಯೆ: 1 ಅನ್ನುದಿನಾಂಕ: 26.8.2011 ರಂದು ಬಂಧಿಸಿದ ವಿಷಯವು ವಿವಾದವಾಗಿರುವುದಿಲ್ಲ ಮತ್ತು ಪ್ರಾಸಿಕ್ಯೂಷನ್ ಪ್ರಕಾರದಂತೆ ಆಪಾದಿತಸಂಖ್ಯೆ: 1, ಪೊಲೀಸ್ ಮತ್ತು ಪಂಚ ಸಾಕ್ಷಿದಾರರನ್ನು ಮತ್ತು ಇತರರನ್ನು ಅದೇ ಗ್ರಾಮದಲ್ಲಿರುವ ಪಂಪ್ ಹೌಸ್ಗೆ ಕರೆದುಕೊಂಡು ಹೋಗಿರುತ್ತಾನೆ ಮತ್ತು ಪೊಲೀಸರ ಪ್ರಕಾರದಂತೆ, ಆಪಾದಿತನು ತನ್ನ ಅಡಕೆ ತೋಟದಲ್ಲಿದ್ದ ಸದರಿ ಪಂಪ್ ಹೌಸ್ನ ಬಾಗಿಲನ್ನು ತೆರೆದು ಸದರಿ ಪಂಪ್ ಹೌಸ್ ಒಳಗೆ ಪ್ರವೇಶಿಸಿ ಅಲ್ಲಿಂದ ಪ್ಲಾಸ್ಟಿಕ್ ಕವರ್ನಿಂದ ಕಟ್ಟಿದ್ದ ಬಟ್ಟೆಯ ಗಂಟನ್ನು ಹೊರಗೆ ತರುತ್ತಾನೆ ಮತ್ತು ತದನಂತರ ಬಟ್ಟೆಯನ್ನು ಮತ್ತು ಆ ಪ್ಲಾಸ್ಟಿಕ್ ಕವರನ್ನು ಪಂಚ ಸಾಕ್ಷಾದಾರರ ಸಮ್ಮುಖದಲ್ಲಿ ತೆರೆಯುತ್ತಾನೆ.ಸದರಿ ಗಂಟಲ್ಲಿ ಒಂದು ಚಿನ್ನದ ಸರ ಮತ್ತು ನಾಲ್ಕು ಬಳೆಗಳು ಇರುತ್ತವೆ.ನಿಶಾನೆ ಪಿ .4 ರಂತೆ ಪೊಲೀಸರು ಆ ಸ್ಥಳವನ್ನು ಮಹಜರು ಮಾಡಿರುತ್ತಾರೆ ಮತ್ತು ಪ್ರಾ.ಸಾ .3 ರವರು ಸದರಿ ಆಭರಣಗಳನ್ನು ಗುರುತಿಸಿರುತ್ತಾರೆ ಮತ್ತು D ನಿಶಾನೆ ಪಿ .3 ರಂತೆ ಸಮಗ್ರವಾಗಿ ಮಹಜರ್ಅನ್ನು ನಡೆಸಲಾಗಿರುತ್ತದೆ.

15. ಪ್ರಾ.ಸಾ .3 ಮತ್ತು ಪ್ರಾ.ಸಾ .4 ರ ಸಾಕ್ಷ್ಯಗಳನ್ನು ವಿಚಾರಣಾ ಅಧಿಕಾರಿಯ ಸಾಕ್ಷ್ಯದೊಂದಿಗೂ ಸಹ ಸೇರಿಸಲಾಗಿದೆ ಮತ್ತು ಅದರಂತೆಯೇ ಈ ನಿರ್ದಿಷ್ಟ ಮೊಕದ್ದಮೆಯಲ್ಲಿ ವಿಡಿಯೋ ಅಡಕ ತಟ್ಟೆಯು (ಸಿ.ಡಿ.) ಬಹು ಮಹತ್ವವಾದ ಪಾತ್ರವನ್ನು ನಿರ್ವಹಿಸಿದೆ.ಅಧಿವಿಚಾರಣಾ ನ್ಯಾಯಾಲಯದ ಮುಂದೆ, ಸದರಿ ಅಡಕ ತಟ್ಟೆಯನ್ನು (ಸಿ.ಡಿ.) ನಿಶಾನೆ ಪಿ .28 ಎಂದು ಗುರುತು ಮಾಡಲಾಗಿದೆ.ಅಪೀಲುದಾರರ ಪರ ಮಾನ್ಯ ನ್ಯಾಯವಾದಿಗಳು ಮತ್ತು ಹೆಚ್ಚುವರಿ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಈ ಇಬ್ಬರೊಂದಿಗೆ ನಾವು ಸಹ

ವಶಪಡಿಸಿಕೊಂಡ ಪ್ರಕ್ರಿಯೆಗೆ ಸಂಬಂಧಿಸಿದ ಚಿತ್ರೀಕರಣವನ್ನು ಬಹಳ ಎಚ್ಚರಿಕೆಯಿಂದ ಪರಿಶೀಲಿಸಿದ್ದೇವೆ ಮತ್ತು ವೀಕ್ಷಿಸಿದ್ದೇವೆ.ಚಿತ್ರೀಕರಣವನ್ನು ಗಮನಕ್ಕೆ ತಂದುಕೊಳ್ಳುವ ಮುಂಚೆ ಈ ನಿರ್ದಿಷ್ಟ ಮೊಕದ್ದಮೆಯಲ್ಲಿ ಪ್ರಾ.ಸಾ .3 ಮತ್ತು ಪ್ರಾ.ಸಾ .4 ಬಹಳ ಮಹತ್ವದ ಪಾತ್ರವನ್ನು ವಹಿಸಿರುತ್ತಾರೆ.ನಾವು ಮೊದಲು ಈ ಸಾಕ್ಷಿಗಳ ಸಾಕ್ಷ್ಯವನ್ನು ಪರಿಗಣಿಸುತ್ತೇವೆ.

16. ವಾಸ್ತವವಾಗಿ, ಪ್ರಾ.ಸಾ.3 ಪಂಚದ ಸಾಕ್ಷಿಯಾಗಿರುವುದಿಲ್ಲ, ಪಂಚನಾಮೆಗೆ ಸಹಿಯನ್ನು ಹಾಕಿರುವುದಿಲ್ಲ.ಆದಾಗ್ಯೂ, ವಶಪಡಿಸಿಕೊಂಡ ವಸ್ತುಗಳಿಗೆ ಸಂಬಂಧಿಸಿದಂತೆ ಆಕೆ ಕೆಲವೊಂದು ಹೇಳಿಕೆಯನ್ನು ನೀಡಿರುತ್ತಾಳೆ.ಆಕೆ ತನ್ನ ಸಾಕ್ಷ್ಯದಲ್ಲಿ ನಿಖರವಾಗಿ ನೀಡಿದ ಹೇಳಿಕೆಯಲ್ಲಿದಿನಾಂಕ: 26.8.2011 ರಂದು ಸಂಜೆ ಸುಮಾರು 4.30 ರ ಸಮಯದಲ್ಲಿ ಆಕೆಗೆ ಮತ್ತು ಆಕೆಯ ಹತ್ತಿರದ ಸಂಬಂಧಿಯಾದ ಅಕ್ಕನ ಮಗನಾದ ಶಿವಶಂಕರನಿಗೆ ಪೊಲೀಸರು ಸಂಜೆ 4.30 ರ ಸುಮಾರಿಗೆ ಆಪಾದಿತಸಂಖ್ಯೆ: 1 ಅನ್ನು ಬಂಧಿಸಿ ಮತ್ತು ಆತನನ್ನು ತೋಟದ ಕಡೆಗೆ ಕರೆದುಕೊಂಡು ಹೋಗುತ್ತಿರುವ ವಿಷಯದ ಮಾಹಿತಿ ಅವಳಿಗೆ ದೊರೆತಿರುತ್ತದೆ.ಮಾಹಿತಿ ದೊರೆತ ನಂತರ, ಈ ಸಾಕ್ಷಿದಾರಳು ಮತ್ತು ಶಿವಶಂಕರ ಮತ್ತು ಮತ್ತೊಬ್ಬ ಸಾಕ್ಷಿದಾರನಾದ ಗುರುಮೂರ್ತಿ (ಪ್ರಾ.ಸಾ .4) ಯೊಂದಿಗೆ ಆ ನಿರ್ದಿಷ್ಟ ಸ್ಥಳಕ್ಕೆ ಹೋಗಿರುತ್ತಾಳೆ.ಮುಂದುವರೆದು, ಪ್ರಾ.ಸಾ .

3 ಆಪಾದಿತನು ಪಂಪ್ ಹೌಸ್ ಒಳಗಿಂದ ಚಿನ್ನದ ಆಭರಣಗಳಿದ್ದ ಸದರಿ ಕವರನ್ನು ಹೊರತಂದು ಅದನ್ನು ಬಿಚ್ಚಿದಾಗ ಅದರಲ್ಲಿ ನಾಲ್ಕು ಚಿನ್ನದ ಬಳೆಗಳು ಮತ್ತು ಒಂದು ಚಿನ್ನದ ಸರವಿರುತ್ತದೆ ಮತ್ತು ಅವುಗಳನ್ನು ಈಗಾಗಲೇ ಮು.ಮಾ .3 ರಿಂದ 7 ಎಂದು ಗುರುತು ಮಾಡಲಾಗಿರುತ್ತದೆ ಮತ್ತು ಆಕೆ ಈ ಎಲ್ಲಾ ಆಭರಣವು ತನ್ನ ಅತ್ತೆಯಾದ ಮೃತ ಬಸಮ್ಮಳಿಗೆ ಸೇರಿದ್ದು ಎಂಬುದನ್ನೂ ಸಹ ಆಕೆ ಅಲ್ಲಿ ಪ್ರತ್ಯಕ್ಷವಾಗಿಯೇ ಗುರುತಿಸಿರುತ್ತಾಳೆ.

17. ಪಾಟಿ ಸವಾಲಿನ ಸಮಯದಲ್ಲಿ, ಆಕೆ, ಆ ನಿರ್ದಿಷ್ಟ ದಿನದಂದು, ಸಂಜೆ ಸುಮಾರು 4.30 ರ ಸಮಯದಲ್ಲಿ, ಪೊಲೀಸರು ಆಪಾದಿತನನ್ನು ಬಂಧಿಸಿ ಅವನ ತೋಟವಿರುವ ಜಾಗಕ್ಕೆ ಕರೆದುಕೊಂಡು ಹೋದ ವಿಷಯ ತಿಳಿದು, ಗುರುಮೂರ್ತಿ ಮತ್ತು ಶಿವಶಂಕರ ಅವರುಗಳೊಂದಿಗೆ ಆಕೆ ಆ ನಿರ್ದಿಷ್ಟ ಸ್ಥಳಕ್ಕೆ ಬರುವಷ್ಟರಲ್ಲಿಯೇ ಆ ಸ್ಥಳದಲ್ಲಿ ಸುಮಾರು 500 ರಿಂದ 600 ಜನರಿಂದ ತುಂಬಿರುತ್ತದೆ ಮತ್ತು ಪೊಲೀಸರು ಆಪಾದಿತನನ್ನು ಸದರಿ ತೋಟದ ಜಾಗಕ್ಕೆ ಕರೆದುಕೊಂಡು ಬಂದಿರುತ್ತಾರೆ ಎಂದು ಕರಾರುವಕ್ಕಾದ ಹೇಳಿಕೆಯನ್ನು ನೀಡಿರುತ್ತಾಳೆ.ಮುಂದುವರೆದು ತಾನು ಆರೋಪಿಯ ತೋಟಕ್ಕೆ ಹೋಗುವಷ್ಟರಲ್ಲಿಯೇ ಪೊಲೀಸರು ಆಗಲೇ ಆ ಸ್ಥಳದಲ್ಲಿದ್ದರೆಂದು ಮತ್ತು ಆಪಾದಿತನು ಒಂದು ಕಟ್ಟೆಯ ಮೇಲೆ ಕುಳಿತಿದ್ದನೆಂದು ಆಕೆ ಹೇಳುತ್ತಾಳೆ.ಆ ಸ್ಥಳದಲ್ಲಿ ಸೇರಿದ್ದ ಮಿಕ್ಕ ಎಲ್ಲರೂ ಪಂಪ್ ಹೌಸ್ನ ಹೊರಗಡೆ ನಿಂತಿದ್ದರು ಎಂದು ತಿಳಿಸುತ್ತಾರೆ.ನಾವು ಮೂವರು ಅಲ್ಲಿಗೆ ಹೋಗುವಷ್ಟರಲ್ಲಿ ಪೊಲೀಸರು ತನಗೆ ಮತ್ತು ಇತರರಿಗೆ ಚಿನ್ನದ ಆಭರಣಗಳನ್ನು ತೋರಿಸಿರುತ್ತಾರೆ.ಆದರೆ ಅವುಗಳನ್ನು ಪೊಲೀಸರು ಹಾಗೆಯೇ ಗಂಟು ಕಟ್ಟಿರುವುದಿಲ್ಲ.ಆದ್ದರಿಂದ, ಮೇಲೆ ಹೇಳಲಾದ ಸದರಿ ಸಾಕ್ಷ್ಯವನ್ನು ಗಮನಿಸಿದಾಗ, ಪೊಲೀಸರು ಆಪಾದಿತನನ್ನು ಸದರಿ ಸ್ಥಳಕ್ಕೆ ಕರೆದುಕೊಂಡು ಹೋಗುವ ಮುಂಚೆಯೇ ಆ ವಿಷಯವು ಬಹಿರಂಗಗೊಂಡು ಪ್ರಾ.ಸಾ .3 ಮತ್ತು ಪ್ರಾ.ಸಾ .2 ಅವರಿಗೆ ತಿಳಿದುಬಂದಿರುವುದು ಇಲ್ಲಿ ಗಂಭೀರವಾದ ಸಂಶಯಕ್ಕೆ ಎಡೆಮಾಡಿಕೊಡುತ್ತದೆ.

18. ಪ್ರಾ.ಸಾ .2 ರ ಸ್ವತಃ ತಾನೇ ವಿಚಾರಣೆಗೆ ಒಳಪಟ್ಟ ಸಂದರ್ಭದಲ್ಲಿ ನೀಡಿದ ಹೇಳಿಕೆಯಲ್ಲಿದಿನಾಂಕ: 26.8.2011 ರಂದು ಮಧ್ಯಾಹ್ನ 3.30 ರ ಸುಮಾರಿಗೆ ಬಸಮ್ಮನನ್ನು ಕೊಲೆ ಮಾಡಿದ ಆಪಾದಿತನನ್ನು ಬಂಧಿಸಿದ ಪೊಲೀಸರು ಆ ಮಾಹಿತಿಯನ್ನು ಮತ್ತು ಆಭರಣವನ್ನು ವಶಪಡಿಸಿಕೊಳ್ಳುವ ಪ್ರಕ್ರಿಯೆಯ ಉದ್ದೇಶಕ್ಕಾಗಿ ಸ್ಥಳಕ್ಕೆ ಕರೆದುಕೊಂಡು ಹೋಗುತ್ತಿರುವ ವಿಷಯವನ್ನು ತಿಳಿಸಿರುತ್ತಾಳೆ.ಆದ್ದರಿಂದ, ಮೃತ ಬಸಮ್ಮಳ ಹತ್ತಿರದ ಸಂಬಂಧಿಗಳಿಗೆ ಪೊಲೀಸರು ಆಪಾದಿತನನ್ನು ಬಂಧಿಸಿದ ಮತ್ತು ಆಭರಣಗಳನ್ನು ವಶಪಡಿಸಿಕೊಳ್ಳುವುದಕ್ಕಾಗಿ ಆತನನ್ನು ತೋಟದ ಹತ್ತಿರ ಕರೆದುಕೊಂಡು ಹೋಗುವ ಮಾಹಿತಿಯಿತ್ತು ಎಂಬುದು ಖಚಿತಗೊಳ್ಳುತ್ತದೆ.ಸದರಿ ಆಭರಣಗಳನ್ನು ಆರೋಪಿಯ ಜಮೀನಿನಿಂದ ವಶಪಡಿಸಿಕೊಳ್ಳುವ ಉದ್ದೇಶದಿಂದ ಪೊಲೀಸರು

ಆಪಾದಿತನನ್ನು ಆ ನಿರ್ದಿಷ್ಟ ಸ್ಥಳಕ್ಕೆ ಕರೆದುಕೊಂಡು ಹೋಗುವ ಮುಂಚೆ, ಈ ಸಾಕ್ಷಿದಾರರಿಗೆ ಪೊಲೀಸರು ಏಕೆ ಮಾಹಿತಿ ನೀಡಿದರು ಎಂಬುದು ಊಹಿಸಲು ಸಾಧ್ಯವಾಗುವುದಿಲ್ಲ.ವಸ್ತುಗಳನ್ನು ವಶಪಡಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ಆಪಾದಿತನ ಜೊತೆಯಲ್ಲಿ ಪೊಲೀಸರು ಮತ್ತು ಅವರೊಂದಿಗೆ ಹಾಜರಿರುವ ಪಂಚ ಸಾಕ್ಷಿದಾರರನ್ನು ಹೊರತುಪಡಿಸಿ, ಯಾರೇ ಇತರ ವ್ಯಕ್ತಿಗಳ ಮುಂದೆ ಆಪಾದಿತನ ಸ್ವ-ಇಚ್ಛೆ ಹೇಳಿಕೆಯನ್ನು ಬಹಿರಂಗ ಪಡಿಸದಿರುವುದರಿಂದ ಅವರ ಉದ್ದೇಶ ಏನು ಎಂಬುದು ನಮಗೆ ತಿಳಿದುಬರುತ್ತಿಲ್ಲ.ಆದ್ದರಿಂದ ಇದಕ್ಕೆ ಸಂಬಂಧಿಸಿದಂತೆ, ಪ್ರಾ.ಸಾ .2 ರ ಹೇಳಿಕೆಯು ಸ್ವಲ್ಪ ಹೆಚ್ಚಿನ ಮಟ್ಟಿಗೆಯೇ ಮಹತ್ವವನ್ನು ಪಡೆದುಕೊಂಡಿದೆ.ಪ್ರಾ.ಸಾ .2 ಅನ್ನು ಪ್ರತ್ಯೇಕವಾಗಿ ಮುಖ್ಯ ವಿಚಾರಣೆಗೆ ಒಳಪಡಿಸಿದ ಸಂದರ್ಭದಲ್ಲಿ 13.8.2011 ರಂದು ಪೊಲೀಸ್ ಠಾಣೆಯಲ್ಲಿ ಈ ಸಾಕ್ಷಿದಾರರ ಉಪಸ್ಥಿತಿಯಲ್ಲಿ ಸ್ವತಃ ಪೊಲೀಸರ ಭದ್ರತೆಯಲ್ಲಿ ಮತ್ತು ಮುದ್ದೆ ಮಾಲು 3 ರಿಂದ 7 ರ ವರೆಗಿನ ವಸ್ತುಗಳನ್ನು ನನಗೆ ತೋರಿಸಲಾಯಿತು ಎಂದು ಹೇಳಿಕೆ ನೀಡಿರುತ್ತಾನೆ.ಪ್ರಾ.ಸಾ .2 ಮೊದಲ ಬಾರಿಗೆದಿನಾಂಕ: 13.8.2011 ರಂದು ಪೊಲೀಸ್ ಠಾಣೆಗೆ ಹೋದಾಗ, ಅಷ್ಟರಲ್ಲಾಗಲೇ ಆಪಾದಿತಸಂಖ್ಯೆ: 1 ಪೊಲೀಸ್ ಠಾಣೆಯಲ್ಲಿದ್ದ ಬಗ್ಗೆ ಮತ್ತು ಚಿನ್ನದ ಆಭರಣಗಳನ್ನು ಅಲ್ಲಿ ನೋಡಿದ ಬಗ್ಗೆ ಸ್ಪಷ್ಟವಾಗಿ ತಿಳಿಸಿರುತ್ತಾನೆ.ಮುಂದುವರೆದು,ದಿನಾಂಕ: 28.8.2011 ರಂದು ಮು.ಮಾ .3 ರಿಂದ 7 ನ್ನು ವಶಪಡಿಸಿಕೊಂಡಾಗ ರಾತ್ರಿಯ ವೇಳೆಯಾಗಿತ್ತು ಮತ್ತು ಆಪಾದಿತಸಂಖ್ಯೆ: 2 ಪೊಲೀಸ್ ಠಾಣೆಯಲ್ಲಿದ್ದನು ಮತ್ತು ಪೊಲೀಸ್ ಠಾಣೆಯಲ್ಲಿ ಆಪಾದಿತ ಸಂಖ್ಯೆ:2 ಅನ್ನು ಗುರುತಿಸಿರುವ ಬಗ್ಗೆಯನ್ನು ಸಹ ಹೇಳಿಕೆಯನ್ನು ಮುಖ್ಯ ವಿಚಾರಣಾ ಸಂದರ್ಭದಲ್ಲಿ ನೀಡಿರುತ್ತಾನೆ.

19. ಆದ್ದರಿಂದ, ಸಾಕ್ಷ್ಯದ ಈ ನಿರ್ದಿಷ್ಟ ಅಂಶವನ್ನು ಪರಿಗಣನೆಗೆ ತೆಗೆದುಕೊಂಡರೇ ಪೊಲೀಸರಿಗೆ ಅದಾಗಲೇ ಆಪಾದಿತಸಂಖ್ಯೆ: 1 ಲಭ್ಯವಾಗಿರುವುದು ಮತ್ತು ಪೊಲೀಸರಲ್ಲಿ ಅದಾಗಲೇ ಯಾವುದೇ ಚಿನ್ನದ ಆಭರಣವನ್ನು ವಶಪಡಿಸಿಕೊಂಡಿರುವುದು ಮತ್ತು ಅದನ್ನು ಸಾಕ್ಷಿದಾರರಿಗೆ ತೋರಿಸಿರುವ ಸಂಬಂಧದಲ್ಲಿ ಗಂಭೀರವಾದ ಸಂಶಯವನ್ನು ಸೃಷ್ಟಿಸುತ್ತದೆ.ಆದ್ದರಿಂದ, ಮೇಲೆ ಹೇಳಲಾದ ಸದರಿ ಪ್ರಾ.ಸಾ .2 ಮತ್ತು 3 ರ ಸಾಕ್ಷಿದಾರರು ಅಭಿವ್ಯಕ್ತಿಯಲ್ಲಿ ಪೊಲೀಸರಿಗೆ ಈಗಾಗಲೇ ಚಿನ್ನದ ಆಭರಣಗಳು ಲಭ್ಯವಾಗಿರುವುದು ಗಂಭೀರವಾದ ಸಂಶಯವನ್ನು ಸಹ ಸೃಷ್ಟಿಸುತ್ತದೆ.

20. ಪ್ರಾ.ಸಾ .4 ಗುರುಮೂರ್ತಿ ತನ್ನ ಸಾಕ್ಷ್ಯದಲ್ಲಿ ಹೇಳಿಕೆಯಲ್ಲಿ ಆಪಾದಿತರನನ್ನು ಪೊಲೀಸರು ಆ ನಿರ್ದಿಷ್ಟ ಸ್ಥಳಕ್ಕೆ ಕರೆದುಕೊಂಡು ಹೋದಾಗ, ತಾನು ಆ ಸ್ಥಳದಲ್ಲಿ ಉಪಸ್ಥಿತನಿದ್ದೆನು ಎಂದು ಮತ್ತು ಆತನ ಪ್ರಕಾರ ಆಪಾದಿತನಸಂಖ್ಯೆ: 1 ಇವರ ತೋಟದಲ್ಲಿದ್ದ ಪಂಪ್ ಹೌಸ್ ಒಳಗೆ ಪೊಲೀಸರು ಮತ್ತು ಆಪಾದಿತಸಂಖ್ಯೆ: 1 ಹೋದರು.ಆಪಾದಿತಸಂಖ್ಯೆ: 1, ಪಂಪ್ ಹೌಸ್ ಒಳಗಡೆ, ಟೆಲಿವಿಷನ್ನ ಹಿಂದೆ ಇರಿಸಿದ್ದ ಒಂದು ಬಟ್ಟೆಯ ಚೀಲವನ್ನು ತೆಗೆದುಕೊಂಡು ಪಂಪ್ ಹೌಸ್ ಹೊರಗಡೆ ಬಂದು ತೆರೆದಾಗ ಅದರಲ್ಲಿ ನಾಲ್ಕು ಚಿನ್ನದ ಬಳೆಗಳು ಮತ್ತು ಒಂದು ಚಿನ್ನದ ಸರವಿತ್ತು ಎಂದು ಹೇಳಿಕೆ ನೀಡಿರುತ್ತಾನೆ.ಅಲ್ಲದೆ, ಆತನು ನಿಶಾನೆ ಪಿ .4 ರಲ್ಲಿರುವ ತನ್ನ ಸಹಿಯನ್ನೂ ಸಹ ಗುರುತಿಸಿರುತ್ತಾನೆ.ಪಾಟೀ ಸವಾಲಿನ ಸಂದರ್ಭದಲ್ಲಿ, ಸದರಿ ಪಂಪ್ ಹೌಸ್ಗೆ ಬೀಗ ಹಾಕಿರಲಿಲ್ಲವೆಂದು ಮತ್ತು ಅದು ತೆರೆದಿತ್ತು ಎಂದು ನಿಖರವಾಗಿ ಹೇಳುತ್ತಾನೆ.ಆಪಾದಿತನನ್ನು ಪ 0 ಪ್ ಹೌಸ್ ಒಳಗೆ ಕರೆದುಕೊಂಡು ಹೋದಾಗ ತಾನು ಒಳಗಡೆ ಹೋಗಿರಲಿಲ್ಲವೆಂದು, ಸದರಿ ಪಂಪ್ ಹೌಸ್ನ ಬಾಗಿಲಿನ ಹೊರಗಡೆ ನಿಂತಿದ್ದೇನೆಂದು ಮತ್ತು ತದನಂತರ ಆಪಾದಿತನನ್ನು ಒಳಗಡೆ ಕರೆದುಕೊಂಡು ಹೋದರು ಮತ್ತು ಒಬ್ಬ ಪೊಲೀಸ್ ಪೇದೆ ಆಪಾದಿತನ ಜೊತೆ ಒಳಗಡೆ ಹೋದ ಸಂದರ್ಭದಲ್ಲಿ ಪೊಲೀಸ್ ಪೇದೆ ಪಂಪ್ ಹೌಸ್ನ ಬಾಗಿಲನ್ನು ಸಂಪೂರ್ಣವಾಗಿ ತೆಗೆದು ಅದರ ಒಳಗೆ ಹೋಗುತ್ತಾನೆ ಎಂದು ಹೇಳಿಕೆ ನೀಡಿರುತ್ತಾನೆ.ಅಧಿವಿಚಾರಣಾ ನ್ಯಾಯಾಲಯವು, ಪ್ರಾಸಿಕ್ಯೂಷನ್ ನೀಡಿದ ವಿಡಿಯೋ ಚಿತ್ರೀಕರಣವನ್ನು ವೀಕ್ಷಿಸಲು ಪುರಸ್ಕರಿಸಿದೆ ಮತ್ತು ನಂತರದಲ್ಲಿ ಅದನ್ನು ಅವಗಾಹನೆಗೆ ತಂದುಕೊಂಡಿದೆ.ಮೇಲಿನ ಸದರಿ ವಾಸ್ತವಿಕ ಅಂಶಗಳನ್ನು ಸಾಕ್ಷಿದಾರರು ಹೇಳಿಕೆ ನೀಡಿರುತ್ತಾರೆ.ಆಪಾದಿತನನ್ನು ಪಂಪ್ ಹೌಸ್ ಒಳಗೆ ಕರೆದುಕೊಂಡು ಹೋದಾಗ ಅವನೊಂದಿಗೆ ಇಬ್ಬರು ಪೊಲೀಸ್ ಪೇದೆಗಳು ಆತನ ಜೊತೆ ಒಳಗೆ ಹೋಗುತ್ತಾರೆ ಮತ್ತು ಅಲ್ಲಿಂದ ಹೊರಗೆ ಬರುವಾಗ ಒಬ್ಬ ಪೊಲೀಸ್ ಪೇದೆ ಆಪಾದಿತನ ಹಿಂದೆ ಇದ್ದನೆಂದು ಹೇಳಿಕೆಯನ್ನು ನೀಡಿರುತ್ತಾನೆ.ಆದ್ದರಿಂದ, ಈ ಸಾಕ್ಷಿದಾರನ ಸಾಕ್ಷ್ಯದಿಂದ, ಸಾಕ್ಷಿದಾರನು ಪಂಪ್ ಹೌಸ್ನ ಒಳಗಡೆ ಹೋಗಿರುವುದಿಲ್ಲ ಎಂಬ ಅಂಶ ಮತ್ತು ಆ ಬಟ್ಟೆ ಗಂಟು (ಚೀಲ) ಟೆಲಿವಿಷನ್ನ ಹಿಂದೆ ಇರಿಸಿದ್ದೋ ಅಥವಾ ಇನ್ನಾವುದರ ಹಿಂದೆ ಇತ್ತೋ ಎಂಬ ಮಾಹಿತಿ ಆತನಿಗೆ ಸ್ಪಷ್ಟವಾಗಿ ತಿಳಿದಿರುವುದಿಲ್ಲ.ಆಪಾದಿತನು ಪಂಪ್ ಹೌಸ್ನ ಒಳಗಡೆ ಹೋದ ಮೇಲೆ, ಟೆಲಿವಿಷನ್ನ ಹಿಂದೆ ಇರಿಸಿದ್ದ ಸದರಿ ಬಟ್ಟೆ ಗಂಟನ್ನು ಆತನು ಹೊರತೆಗೆದ ಎಂಬ ನಿರ್ದಿಷ್ಟ ಅಂಶದ ಬಗ್ಗೆ ಯಾರೊಬ್ಬರೂ ಸಹ ಇದುವರೆವಿಗೂ ಮಾತನಾಡಿರುವುದಿಲ್ಲ.

21. ಈ ಎಲ್ಲಾ ಕುತೂಹಲದೊಂದಿಗೆ, ಅಪೀಲುದಾರರ ಪರವಾಗಿ ಮಾನ್ಯ ನ್ಯಾಯವಾದಿಗಳ ಮತ್ತು ಮಾನ್ಯ ಹೆಚ್ಚುವರಿ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಅವರುಗಳೊಂದಿಗೆ ಗಣಕಯಂತ್ರ ತಂತ್ರಜ್ಞಾನವಾದ ಲಾಪ್ಟಾಪ್ನ ಸಹಾಯದಿಂದ, ನಾವು ವಿಡಿಯೋ ಚಿತ್ರೀಕರಣವನ್ನು ಬಹಳ ಜಾಗರೂಕತೆಯಿಂದ ಎರಡು ಸಲ ವೀಕ್ಷಿಸಿರುತ್ತೇವೆ.ಚಿತ್ರೀಕರಣವಾದ ವಿಡಿಯೋವನ್ನು ನೋಡಿದ ನಂತರ, ಅಪೀಲುದಾರರ ಪರವಾದ ಮಾನ್ಯ ನ್ಯಾಯವಾದಿಗಳು ಆಪಾದಿತನನ್ನು ಪಂಪ್ ಹೌಸ್ ಒಳಗಡೆ ಕರೆದುಕೊಂಡು ಹೋದ ಚಿತ್ರೀಕರಣವನ್ನು ಮಾನ್ಯ ಹೆಚ್ಚುವರಿ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಸಹ ನಿಷ್ಪಕ್ಷಪಾತದೊಂದಿಗೆ ಒಪ್ಪಿಕೊಳ್ಳುತ್ತಾರೆ.ಸದರಿ ಪಂಪ್ ಹೌಸ್ ಕತ್ತಲೆಯಿಂದ ಕೂಡಿತ್ತು ಎಂಬುದು ಬಹಳ ಸ್ಪಷ್ಟವಾಗಿ ಚಿತ್ರೀಕರಣದಲ್ಲಿ ಕಾಣಿಸುತ್ತದೆ ಮತ್ತು ಪಂಪ್ ಹೌಸ್ ಒಳಗಡೆ ಏನು ಸಂಭವಿಸಿತು ಎಂಬುದನ್ನು ತೋರಿಸಲು ವಿಡಿಯೋ ಚಿತ್ರೀಕರಣ ಮಾಡುವ ಉದ್ದೇಶದಿಂದ ವಿಡಿಯೋಗ್ರಾಫರ್ ಪಂಪ್ಹೌಸ್ ಒಳಗೆ ಹೋಗಿರುವುದಿಲ್ಲ.ಆಪಾದಿತನ ಜೊತೆ ಸುಮಾರು ನಾಲ್ಕು ಅಥವಾ ಐದು ವ್ಯಕ್ತಿಗಳು ಪಂಪ್ ಹೌಸ್ನ ಒಳಗಡೆ ಹೋಗಿರುತ್ತಾರೆ ಮತ್ತು ಅಲ್ಲಿಂದ ಹೊರಬರುವಾಗ, ಚೆಕ್ಸ್ ಅಂಗಿ ತೊಟ್ಟ ಒಬ್ಬ ವ್ಯಕ್ತಿಯು ಆಪಾದಿತನ ಬ ಕೈಯೊಳಗೆ ಬಟ್ಟೆ ಗಂಟನ್ನು ತುರುಕುತ್ತಿರುವುದು ಮತ್ತು ಯಾರೋ ಒಬ್ಬರು " ಅವನಿಗೆ ಕೊಡು ' ಎಂದು ಕನ್ನಡದಲ್ಲಿ ಪಿಸುಗುಡುತ್ತಿರುವುದು ವಿಡಿಯೋದ ಚಿತ್ರೀಕರಣದಲ್ಲಿ ಸ್ಪಷ್ಟವಾಗಿ ಕಾಣಿಸುತ್ತದೆ ಮತ್ತು ಕೇಳುತ್ತದೆ.ಪಂಪ್ ಹೌಸ್ನ ಒಳಗೆ ಯಾಕೆ ಪೊಲೀಸ್ ಪೇದೆಗಳು ಹೋದರು ಮತ್ತು ತನಿಖಾ ಅಧಿಕಾರಿಯೂ ಪಂಪ್ ಹೌಸ್ ಒಳಗೆ ಪಂಚ ಸಾಕ್ಷಿಗಳನ್ನು ಕಳುಹಿಸುವುದರ ಬಗ್ಗೆ ಯಾಕೆ ಗಮನ ಕೊಡಲಿಲ್ಲ ಎಂಬ ಎರಡು ಅಂಶಗಳನ್ನು ವಾಸ್ತವವಾಗಿ ಪ್ರಾಸಿಕ್ಯೂಷನ್ ಸ್ಪಷ್ಟವಾಗಿ ತಿಳಿಸಿರುವುದಿಲ್ಲ.ಅಲ್ಲದೆ ಪ್ರಾಸಿಕ್ಯೂಷನ್ ಆಪಾದಿತನು ಎಲ್ಲಿ ಬಟ್ಟೆ ಗಂಟನ್ನು ಇಟ್ಟಿರುವನೋ ಮತ್ತು ಅದನ್ನು ಅಲ್ಲಿಂದ ತೆಗೆದುಕೊಂಡು ಪಂಪ್ಹೌಸ್ನ ಹೊರಗೆ ತಂದನು ಎ ೦ ಬ ಆಪಾದಿತನ ವರ್ತನೆಯನ್ನು ಮಾತ್ರವೇ ಎತ್ತಿ ತೋರಿಸಿರುತ್ತಾರೆ.ಆದ್ದರಿಂದ, ಪೊಲೀಸ್ ಪೇದೆಯಾದ ವ್ಯಕ್ತಿಯು ತನ್ನ ಕೈಯಲ್ಲಿದ್ದ ಬಟ್ಟೆ ಗಂಟನ್ನು ನಂತರ ಅದನ್ನು ಆಪಾದಿತನ ಕೈಯಿಗೆ ತುರುಕಿದನು, ತದನಂತರ ಆಪಾದಿತನು ಪಂಪ್ ಹೌಸ್ನ ಹೊರಗೆ ಬಂದು ಸದರಿ ಬಟ್ಟೆ ಗಂಟನ್ನು ಪಂಚ ಸಾಕ್ಷಿದಾರರ ಉಪಸ್ಥಿತಿಯಲ್ಲಿ ತೆರೆಯುತ್ತಾನೆ ಈ ಅಂಶಗಳು ಗಂಭೀರವಾದ ಸಂಶಯವನ್ನು ಸೃಷ್ಟಿಸಿದೆ.ತನಿಖಾ ಅಧಿಕಾರಿಯೂ ಕೂಡ, ಅವನ ಪಾಟೀ ಸವಾಲಿನ ಸಂದರ್ಭದಲ್ಲಿ ಇದರ ಬಗ್ಗೆ ಯಾವುದೇ ರೀತಿಯ ವಿವರಣೆಯನ್ನು ಸಹ ನೀಡಿರುವುದಿಲ್ಲ.

22. ಆಪಾದಿತಸಂಖ್ಯೆ: 1 ಸೂಚಿಸಿದ ಪ್ರಕಾರದಂತೆ ಸದರಿ ವಸ್ತುಗಳನ್ನು ವಶಪಡಿಸಿಕೊಂಡ ಸಂಬಂಧದಲ್ಲಿ ನಡೆದ ಮಾತುಕತೆಯನ್ನು ತನಿಖಾ ಅಧಿಕಾರಿಯು ತನ್ನ ಸಾಕ್ಷ್ಯದಲ್ಲಿ ಹೇಳಿಕೆ ನೀಡಿರುವುದು ಇಲ್ಲಿ ಮಹತ್ವಪೂರ್ಣವಾದ ಸಾಕ್ಷ್ಯವಾಗಿದೆ.ಪಾಟೀ ಸವಾಲಿನ ಸಂದರ್ಭದಲ್ಲಿ ಸಾಕ್ಷ್ಯದಾರರು ತನಿಖಾಧಿಕಾರಿಯು ಪೊಲೀಸ್ ಸಿಬ್ಬಂದಿಯಾಗಿಲ್ಲದ ನನ್ನನ್ನು ಶ್ರೀ ನಿಂಗೇಗೌಡ, ಪಂಪ್ ಹೌಸ್ ಒಳಗೆ ಹೋಗಲು ಅನುಮತಿಸಲಾಯಿತು ಮತ್ತು ವಾಸ್ತವವಾಗಿ ಸದರಿ ಬಟ್ಟೆಯ ಗಂಟನ್ನು ತಾನೇ ತಂದಿದ್ದು ಅದನ್ನು ಆಪಾದಿತನ ಕೈಗೆ ಕೊಡಲಾಯಿತು ಎಂಬುದನ್ನು ತನಿಖಾಧಿಕಾರಿ ಹೇಳಿದಂತೆ ತಾನು ನಡೆದುಕೊಂಡಿದ್ದಾಗಿ ಹೇಳಿಕೆ ನೀಡಿರುತ್ತಾನೆ.ಸದರಿ ಪ್ರಶ್ನೆಗೆ ಆತ ಸಮರ್ಪಕವಾಗಿ ಉತ್ತರಿಸಿರುವುದಿಲ್ಲ ಬದಲಿಗೆ ಹಾರಿಕೆಯ ಉತ್ತರ ನೀಡಿರುತ್ತಾನೆ.ಆದರೆ ವಿಡಿಯೋ ಚಿತ್ರೀಕರಣವನ್ನು ಬಹಳ ಜಾಗರೂಕತೆಯಿಂದ ಅವಲೋಕಿಸಿದಾಗ, ನಾವು ಗಮನಿಸಿದ ಅಂಶವೇನೆಂದರೆ ಸದರಿ ಬಟ್ಟೆಯ ಗಂಟನ್ನು ಆಪಾದಿತನ ಕೈಗೆ ಯಾರೋ ಒಬ್ಬರು ಒತ್ತಾಯವಾಗಿ ಕೊಡುತ್ತಿದ್ದರು ಮತ್ತು ' ಅವನಿಗೆ ಕೊಡು ಎಂದು ಯಾರೋ ಪಿಸುಗುಡುತ್ತಿದ್ದುದು ನಮಗೆ ಬಹಳ ಸ್ಪಷ್ಟವಾಗಿ ಕಾಣಿಸಿತು ಮತ್ತು ಕೇಳಿಸಿತು.ಈ ನಿರ್ದಿಷ್ಟ ಅಂಶವನ್ನು ವಿವರಿಸದಿರುವಾಗ ಒಂದು ಗಂಭೀರವಾದ ಸಂಶಯವು ಹುಟ್ಟಿಹಾಕುತ್ತದೆ ಎಂಬುದು ನಮ್ಮ ಅಭಿಪ್ರಾಯವಾಗಿದೆ ಅಂದರೆ, ವಾಸ್ತವವಾಗಿ ಆಪಾದಿತನು ಆ ನಿರ್ದಿಷ್ಟ ಬಟ್ಟೆ ಗಂಟನ್ನು ಟಿ.ವಿ. ಸೆಟ್ ಹಿಂದೆ ಇರಿಸಿದ ಬಗ್ಗೆಯಾಗಲೀ ಮತ್ತು ಸದರಿ ವಿಷಯ ಅವನೊಬ್ಬನಿಗೆ ಮಾತ್ರವೇ ತಿಳಿದಿತ್ತೇ ಮತ್ತು ನೀಡಿದ ಸೂಚನೆಯಂತೆ ಪೊಲೀಸರು ಆಪಾದಿತನನ್ನು ಆತನನ್ನು ಪಂಪ್ಹೌಸ್ನ ಒಳಗೆ ಕರೆದುಕೊಂಡು ಹೋದಾಗ ಆತ ಸದರಿ ಬಟ್ಟೆ ಗಂಟನ್ನು ಹೊರಗೆ ತಂದನೇ ಎಂಬುದು ನಮಗೆ ಸಾಕಷ್ಟು ಸಂಶಯಾಸ್ಪದ ಅನುಮಾನವನ್ನು ಹುಟ್ಟಿ ಹಾಕುತ್ತದೆ.

23. ವಿಡಿಯೋ ಚಿತ್ರೀಕರಣವನ್ನು ಅವಲೋಕಿಸಿದಾಗಲೂ ಆಪಾದಿತನನ್ನು ಪೊಲೀಸರು ಪಂಪ್ ಹೌಸ್ ಹತ್ತಿರ ಕರೆದುಕೊಂಡು ಹೋದಾಗ ಆತ ಪಂಪ್ ಹೌಸ್ನ ಬಾಗಿಲನ್ನು ಸುಮ್ಮನೆ ಕೈಯಿಂದ ತಳ್ಳುತ್ತಾನೆ ಆ ಕೂಡಲೇ ಬಾಗಿಲು ತೆರೆದುಕೊಳ್ಳುತ್ತದೆ ಎಂಬ ಅಂಶವು ಬಹಳ ಸ್ಪಷ್ಟವಾಗಿ ಗೋಚರಿಸುತ್ತದೆ ಮತ್ತು ಇದು ಮಹತ್ತರವಾದ ಉಲ್ಲೇಖವಾಗಿದೆ.ಆದ್ದರಿಂದ, ಆ ನಿರ್ದಿಷ್ಟ ಸಮಯದಲ್ಲಿ ಅ ಪಂಪ್ ಹೌಸ್ನ ಬಾಗಿಲಿಗೆ ಅಗುಳಿಯನ್ನು ಅಥವಾ ಬಾಗಿಲಿಗೆ ಬೀಗ ಹಾಕಿರಲಿಲ್ಲ ಮತ್ತು ಬಾಗಿಲು ತೆರೆದಿರುವ ಅಂಶವು ಸ್ಪಷ್ಟವಾಗುತ್ತದೆ.ಪ್ರಾ.ಸಾ .3 ಭಾರತಿ,

ಪ್ರಾ.ಸಾ.4 ಗುರುಮೂರ್ತಿ ಮತ್ತು ಶ್ರೀ ಶಿವಶಂಕರ್‌ರವರಿಗೆ ಆಪಾದಿತನನ್ನು ಪೊಲೀಸರು ಆ ನಿರ್ದಿಷ್ಟ ಸ್ಥಳಕ್ಕೆ ಕರೆದುಕೊಂಡು ಹೋಗುವ ಮಾಹಿತಿ ಈಗಾಗಲೇ ದೊರೆತಿರುತ್ತದೆ ಮತ್ತು ಪಂಪ್ ಹೌಸ್ನ ಬಾಗಿಲು ತೆರೆದಿತ್ತು ಎಂದು ಭಾವಿಸುವುದಾದರೆ, ಆ ವ್ಯಕ್ತಿಗಳು ಆ ನಿರ್ದಿಷ್ಟ ಜಾಗಕ್ಕೆ ಬಂದು ಪಂಪ್ಹೌಸ್ನ ಒಳಗೆ ಪ್ರವೇಶ ಪಡೆದಿರುವ ಸಂಭವವಿರುತ್ತದೆ ಮತ್ತು ಪಂಪ್ ಹೌಸ್ ಒಳಗಿನ ಪರಿಸ್ಥಿತಿಯನ್ನು ಪರಿಶೀಲಿಸಿರುವ ಯಾರಾದರೂ ಪಂಪ್ ಹೌಸ್ನ ಒಳಗೆ ಬಂದು ಬಟ್ಟೆಯ ಗಂಟನ್ನು ಸದರಿ ಸ್ಥಳದಲ್ಲಿ ಇರಿಸಿರುವ ಸಂಭವವಿರುತ್ತದೆ ಎಂಬುದು ಅಪೀಲುದಾರ ನ್ಯಾಯವಾದಿಗಳ ವಾದವಾಗಿದೆ.ಆದ್ದರಿಂದ ನನ್ನ ಅಭಿಪ್ರಾಯದಲ್ಲಿ ಒಂದೇ ಸಂಗತಿ ಸನ್ನಿವೇಶಕ್ಕೆ ಸಂಬಂಧಿಸಿದಂತೆ ಎರಡು ಆಯಾಮಗಳಲ್ಲಿ ತೀರ್ಮಾನವನ್ನು ಪರಾಮರ್ಶಿಸಬೇಕಾಗುತ್ತದೆ ಇಲ್ಲಿ ಆಪಾದಿತನ ಪರವಾಗಿ ಮತ್ತು ಆಪಾದಿತನು ಅಪೇಕ್ಷಿಸಿದ ತೀರ್ಮಾನಕ್ಕೆ ಪ್ರಾಶಸ್ತ್ಯ ಬಿ ನೀಡಬೇಕೆಂಬುದು ನಮ್ಮ D ಅಭಿಪ್ರಾಯವಾಗಿರುತ್ತದೆ.ಆದ್ದರಿಂದ, ಮೇಲೆ ಹೇಳಲಾದ ಸಂಗತಿಗಳನ್ನು ಮತ್ತು ಸನ್ನಿವೇಶಗಳನ್ನು ಗಮನಕ್ಕೆ ತಂದುಕೊಂಡಾಗ ಆಪಾದಿತಸಂಖ್ಯೆ: 1 ರಿಂದ ವಶಪಡಿಸಿಕೊಂಡ ವಸ್ತುಗಳಿಗೆ ಸಂಬಂಧಿಸಿದಂತೆ ಪೊಲೀಸರ ಹೇಳಿಕೆಯಲ್ಲಿ ನಿಷ್ಪಕ್ಷಪಾತವಾದ ವಿಚಾರಣೆ ನಡೆದಿದೆ ಎಂದು ಹೇಳಲಾಗುತ್ತಿಲ್ಲ.ಆದ್ದರಿಂದ ನಾವು ಇಲ್ಲಿ ಪ್ರಾಸಿಕ್ಯೂಷನ್ ವಶಪಡಿಸಿಕೊಂಡ ಸನ್ನಿವೇಶಗಳನ್ನು ಪ್ರಸ್ತುತ ಪಡಿಸಿರುವುದನ್ನು ಪ್ರಾಸಿಕ್ಯೂಷನ್ ಸಂದೇಹಾತೀತವಾಗಿ ರುಜುವಾತುಪಡಿಸಿದೆ ಎಂಬುದನ್ನು ಸ್ವೀಕರಿಸುವುದಕ್ಕೆ ನಮಗೆ ಸಾಧ್ಯವಿಲ್ಲ.

24. ಆಪಾದಿತನ ಚಲನವಲನದ ಬಗ್ಗೆ ಮಾಹಿತಿ ಪಡೆಯುವ ಉದ್ದೇಶದಿಂದ ಪ್ರಾ.ಸಾ .14 ಪ್ರದೀಪ್ ಕುಮಾರ್ ಎಂಬಾತನನ್ನು ವಿಚಾರಣೆ ನಡೆಸಿದಾಗ, ಅವನು ತನ್ನ ಸಾಕ್ಷ್ಯವನ್ನು ಪ್ಯಾರಾ 4 ರಲ್ಲಿದಿನಾಂಕ: 19.08.2011 ರಂದು ನೀಡಿದ ಹೇಳಿಕೆಯಲ್ಲಿ ಆಪಾದಿತಸಂಖ್ಯೆ: 1 ಮತ್ತು ಶ್ರೀ ಪ್ರಕಾಶ್ ಎಂಬುವವರು ಮೋಟಾರು ಸೈಕಲ್ನಿಂದ ಬಿದ್ದು ಗಾಯಗೊಂಡಿರುವ ಬಗ್ಗೆ ತಿಳಿಸಿರುತ್ತಾನೆ.ಆ ಸಂದರ್ಭದಲ್ಲಿ ತಾನು ೧ ಆಸ್ಪತ್ರೆಗೆ ಹೋಗಿ ಆಪಾದಿತಸಂಖ್ಯೆ: 1 ಮತ್ತು ಶ್ರೀ ಪ್ರಕಾಶ್‌ರವರ ಆರೋಗ್ಯವನ್ನು ವಿಚಾರಿಸಿರುತ್ತೇನೆ.ಆ ಸಂದರ್ಭದಲ್ಲಿ ಅವರಿಬ್ಬರು ಹೇಳುವ ವಿಚಾರವೇನೆಂದರೆ, ಅವರಿಬ್ಬರು ಮೂ಼ಲ್ಕು ಗಿರವಿ ಅಂಗಡಿಗೆ ಹೋಗಿಬರುವಾಗ ಅವರಿಬ್ಬರು ಮೋಟಾರ್ ಸೈಕಲ್ನಿಂದ ಬಿದ್ದು ಗಾಯಗೊಂಡ ಬಗ್ಗೆ ತಿಳಿಸಿದ ವಿಚಾರವನ್ನು ತಮ್ಮ ಸಾಕ್ಷ್ಯದ ಸಂದರ್ಭದಲ್ಲಿ ಸಾಕ್ಷ್ಯವಾಗಿ ಹೇಳಿಕೆ ನೀಡಿರುತ್ತಾರೆ.ಈ ಸಾಕ್ಷ್ಯದಲ್ಲಿ ಹಲವು ಸಂದೇಹವನ್ನು ಸೃಜಿಸುತ್ತಾನೆ ಅದರಲ್ಲಿ ಆಪಾದಿತಸಂಖ್ಯೆ: 1 ಯಾವ ಉದ್ದೇಶದಿಂದ ಗಿರವಿ ಅಂಗಡಿಗೆ ಹೋಗಿದ್ದನು, ಅಲ್ಲದೆ ಅದರಲ್ಲೂ ನಿರ್ದಿಷ್ಟವಾಗಿ ಮೂ಼ಲ್ಕು ಗಿರವಿ ಅಂಗಡಿಗೆ ಏಕಾಗಿ ಹೋಗಿದ್ದನು ಎಂಬ ಅಂಶವು ಹಲವು ಅನುಮಾನಗಳಿಗೆ ಕಾರಣವಾಗುತ್ತದೆ.ಸದರಿ ಅಂಶಗಳ ಬಗ್ಗೆ ಯಾವುದೇ ನಿಖರ ಸಾಕ್ಷ್ಯಗಳು ಇಲ್ಲದಿದ್ದರೂ ಸಹ ಆಭರಣಗಳನ್ನು ಯಾರದೋ ಹತ್ತಿರ ಈಗಾಗಲೇ ಒತ್ತೆಯಿಡಲಾಗಿತ್ತೇ ಮತ್ತು ಆ ಮಾಹಿತಿ ಪೊಲೀಸರಿಗೆ ತಿಳಿದಿತ್ತೇ ಎಂಬ ಗಂಭೀರವಾದ ಸಂದೇಹ ಉದ್ಭವವಾಗುತ್ತವೆ ಮತ್ತು ಸಂದೇಹಗಳನ್ನು ಅಷ್ಟು ಸುಲಭವಾಗಿ ತಳ್ಳಿ ಹಾಕಲು ಬರುವುದಿಲ್ಲ.

25. ಮುಂದುವರೆದು, ಮೇಲಿನ ವಿಷಯಕ್ಕೆ ಸೇರಿದಂತೆ ಪ್ರಾ.ಸಾ .2 ರ ಸಾಕ್ಷ್ಯದಲ್ಲಿದಿನಾಂಕ: 13.8.2011 ರಂದು ತಾನು ಚಿನ್ನದ ಆಭರಣಗಳನ್ನು ನೋಡಿದ್ದೇನೆ ಎಂಬುವ ವಿಷಯವನ್ನು ಈಗಾಗಲೇ ಉಲ್ಲೇಖಿಸಿದ್ದೇವೆ.ಇಲ್ಲಿಸಂಖ್ಯೆ: 1 ಮತ್ತು 2 ನ್ನು ಆಪಾದನೆಯಲ್ಲಿ ಸಿಕ್ಕಿಸುವ ಉದ್ದೇಶದಿಂದ ಪೊಲೀಸರು ವಸ್ತುಗಳನ್ನು ವಶಪಡಿಸಿಕೊಂಡು, ಆಪಾದಿತನನ್ನು ಬಂಧಿಸಿದ ನಂತರದಲ್ಲಿ ಈ ಕಟ್ಟುಕತೆಯನ್ನು ಸೃಜಿಸಿದರೆ ಅಥವಾ ಹುಟ್ಟು ಹಾಕಿದರೇ ಎಂಬ ಗಂಭೀರವಾದ ಸಂದೇಹ ಉದ್ಭವವಾಗುತ್ತವೆ.ಪ್ರಾಸಿಕ್ಯೂಷನ್ ಸಾಕ್ಷ್ಯದಲ್ಲಿ ಸ್ವತಃ ಈ ಎಲ್ಲಾ ಸಂದೇಹಗಳು ಬಹಳಷ್ಟು ನುಸುಳಿಕೊಂಡಿರುವಾಗ ಅದು ವಿಶ್ವಾಸನೀಯ ಅಂಶವಾಗಿರುವುದಿಲ್ಲ.ಅಂಥ ಅಪರಾಧವನ್ನು ಆರೋಪಿಯೂ ಎಸಗಿರುವನೆಂದು ನಿರ್ಣಯಕ್ಕೆ ಬರುವುದಕ್ಕೆ ಅಂಥ ಆಕ್ಷೇಪಣೀಯ ಸಂಗತಿಗಳನ್ನು ಆಧಾರವಾಗಿ ತೆಗೆದುಕೊಳ್ಳುವುದಕ್ಕೆ ಇದೊಂದು ನಿರ್ದಿಷ್ಟವಾಗಿ ಸಾಂದರ್ಭಿಕ ಮೊಕದ್ದಮೆಯಾಗಿದೆ.ಆದ್ದರಿಂದ ನಮ್ಮ ಅಭಿಪ್ರಾಯದಲ್ಲಿ, ವಿಚಾರಣಾ ನ್ಯಾಯಾಲಯವು ಆಪಾದಿತಸಂಖ್ಯೆ: 1 ಇವನಿಂದ ವಾಸ್ತವವಾಗಿ ಚಿನ್ನದ ಆಭರಣವನ್ನು ವಶಪಡಿಸಿಕೊಳ್ಳಲಾಯಿತೇ ಅಥವಾ ಇಲ್ಲವೇ ಎಂಬ ಸತ್ಯವನ್ನು ಕಂಡುಕೊಳ್ಳುವ ಸಂಬಂಧದಲ್ಲಿ ಆದಷ್ಟು ಈ ಎಲ್ಲಾ ದೃಷ್ಟಿಕೋನದಿಂದ ಅದು ಈ ಸಂಗತಿಗಳ ತನ್ನ ಪ್ರಧಾನವಾದ ಗಮನವನ್ನು ನೀಡಿರುವುದಿಲ್ಲ.ಈ ದೃಷ್ಟಿಕೋನಕ್ಕೆ ಸಂಬಂಧಪಟ್ಟಂತೆ ನಮ್ಮ ಅಭಿಪ್ರಾಯವು ಅಧಿವಿಚಾರಣಾ ನ್ಯಾಯಾಲಯದ ಅಭಿಪ್ರಾಯಕ್ಕಿಂತ ಭಿನ್ನವಾದ ಮತ್ತು ಪ್ರಾಸಿಕ್ಯೂಷನ್ ಆರೋಪಿಸಂಖ್ಯೆ: 1 ನಿಂದ ಸದರಿ ಸ್ಥಳದಲ್ಲಿ ಮೂರನೇ ಪಕ್ಷಕಾರನು ಪ್ರವೇಶಿಸಲು ಸಾಧ್ಯವಿರುವ ಸ್ಥಳದಲ್ಲಿ ಚಿನ್ನದ ಆಭರಣವನ್ನು ಪ್ರತ್ಯೇಕವಾಗಿ ವಶಪಡಿಸಿಕೊಳ್ಳಲಾಯಿತು ಎಂಬ ವಸ್ತು ವಿಷಯವನ್ನು ಸಮರ್ಥವಾಗಿ ಸುಸ್ಥಾಪಿಸಿರುವುದಿಲ್ಲ ಎಂಬುದು ನಮ್ಮ ನಿರ್ಣಯವಾಗಿದೆ.ಈ ಅಂಶಗಳನ್ನೊಳಗೊಂಡ ಸಂಗತಿಯ ದೃಷ್ಟಿಯಲ್ಲಿ, ಚಿನ್ನದ ಆಭರಣವನ್ನು ವಶಪಡಿಸಿಕೊಳ್ಳುವ ಸದರಿ ಸ್ಥಳದಲ್ಲಿ ಅದಾಗಲೇ ತುಂಬಾ ಜನರು

ಸೇರಿದ್ದರು ಮತ್ತು ವಶಪಡಿಸಿಕೊಂಡ ಸಂದರ್ಭದಲ್ಲೂ ಸದರಿ ಸ್ಥಳದ ಪಂಪ್ ಹೌಸ್ ಒಳಗೆ ಕೆಲವು ಅಪರಿಚಿತ ವ್ಯಕ್ತಿಗಳು ಪ್ರವೇಶಿಸಲು ಅನುಮತಿಸಿರುವುದು ಮತ್ತು ಆಪಾದಿತನ ಕೈಗೆ ಯಾರೋ ಚೀಲವನ್ನು ತುರುಕುತ್ತಿರುವ ದೃಶ್ಯವು ವಿಡಿಯೋ ಚಿತ್ರೀಕರಣದಲ್ಲಿ ಎದ್ದು ಕಾಣುವ ರೀತಿಯಲ್ಲಿ ಕಂಡುಬರುತ್ತದೆ.

26. ( 4) ಘಟನೆಯ ಮುಂಚೆ ಮತ್ತು ಅದರ ತರುವಾಯ ಆಪಾದಿತನ ನಡವಳಿಕೆ ಅಥವಾ ಚಲನವಲನ,

ನಾವು, ಈಗ, ಘಟನೆಯ ಮುಂಚೆ ಮತ್ತು ಅದರ ತರುವಾಯ ' ಆಪಾದಿತನ ನಡವಳಿಕೆಯ ' ಸಂಗತಿಗಳನ್ನು ಪರಿಗಣನೆಗೆ ತೆಗೆದುಕೊಳ್ಳುತ್ತೇವೆ.ಸಹಜವಾಗಿ, ಪ್ರಾ.ಸಾ .6 ಮತ್ತು ಪ್ರಾ.ಸಾ .7 ಎಂಬ ವ್ಯಕ್ತಿಗಳು ಮೃತರ ಮನೆಯ ಹತ್ತಿರ ಕಟ್ಟಡ ಕಟ್ಟುವ ಕೆಲಸ ಮಾಡುವ ಕಾರ್ಮಿಕರಾಗಿರುವರು ಅವರು ನೀಡಿದ ಹೇಳಿಕೆಯನ್ನು ಮೃತರ ಮನೆಯ ಎದುರುಗಡೆಯಲ್ಲಿ ಒಂದು ಹೊಸ ಮನೆಯ ನಿರ್ಮಾಣ ಕಾರ್ಯ ನಡೆಯುತ್ತಿತ್ತು ಈ ಇಬ್ಬರೂ ಅಲ್ಲಿ ಕೆಲಸ ಮಾಡುತ್ತಿರುವುದಾಗಿ ಹೇಳಿಕೆ ನೀಡಿರುವರು.ಮುಂದುವರೆದು, ತಮ್ಮ ಹೇಳಿಕೆಯಲ್ಲಿದಿನಾಂಕ: 11.8.2011 ರಂದು ಬೆಳಗ್ಗೆ 9.45 ಅಥವಾ 10 ಗಂಟೆಗೆ ಸುಮಾರಿಗೆ ಪ್ರಾ.ಸಾ .6 ಮೃತರ ಮನೆಯ ಹತ್ತಿರ ಒಂದು ಹೀರೋ ಹೊಂಡಾ ಮೋಟಾರ್ ಸೈಕಲ್ ಬಂದದ್ದನ್ನು ಮತ್ತು ಸದರಿ ಮೋಟಾರ್ ಸೈಕಲ್ನಿಂದ ಇಬ್ಬರು ವ್ಯಕ್ತಿಗಳು ಕೆಳಗಿಳಿದಿರುವುದನ್ನು ನೋಡಿರುವುದಾಗಿ ಹೇಳಿಕೆ ನೀಡಿರುತ್ತಾರೆ.ಅದರಲ್ಲಿ ಲುಂಗಿ ತೊಟ್ಟಿದ್ದ ಒಬ್ಬ ವ್ಯಕ್ತಿಯು ತೂರಾಡುತ್ತಿದ್ದನು ಮತ್ತು ಸದರಿ ಮನೆಯ ಒಳಗೆ ಇಬ್ಬರೂ ಪ್ರವೇಶಿಸಿದರು ಮತ್ತು ಅರ್ಧ ಗಂಟೆಯ ನಂತರ ಅವರಿಬ್ಬರು ಆ ಮನೆಯಿಂದ ಹೊರಟು ಹೋದರು.ಮಧ್ಯಾಹ್ನ ಸುಮಾರು 2.45 ರ ಹೊತ್ತಿಗೆ ಪ್ರಾ.ಸಾ .1 ಮನೆಗೆ ಹಿಂದಿರುಗುತ್ತಾಳೆ ಮತ್ತು ಮನೆಯ ಒಳಗೆ ಹೋದ ತಕ್ಷಣ ಮನೆಯಿಂದ ಹೊರಗೆ ಜೋರಾಗಿ ಕಿರುಚಿಕೊಳ್ಳುತ್ತಾ ಓಡಿಬಂದು ತನ್ನ ಅಜ್ಜಿಯು ಮೃತವಾಗಿದ್ದಾಳೆಂದು ಹೇಳುತ್ತಾ ಅಳುತ್ತಿರುತ್ತಾಳೆ.ತುಂಬಾ ಜನ ಅಲ್ಲಿ ಬಂದು ಸೇರುತ್ತಾರೆ ಮತ್ತು ಅವರೆಲ್ಲರೂ ಪ್ರಾ.ಸಾ.1 ರ ಅಜ್ಜಿಯು ಕೊಲೆಯಾಗಿರುವುದರ ಬಗ್ಗೆ ಮತ್ತು ಮೃತಳ ಮೈಮೇಲಿದ್ದ ಚಿನ್ನದ ಆಭರಣಗಳನ್ನು ಯಾರೋ ತೆಗೆದುಕೊಂಡು ಹೋಗಿರುವ ಬಗ್ಗೆ ಮಾತನಾಡಿಕೊಳ್ಳುತ್ತಿದ್ದರು ಎಂದು ಹೇಳಿಕೆ ನೀಡಿರುತ್ತಾರೆ.ಹೇಳಿಕೆಯನ್ನು ಮುಂದುವರೆಸಿ,ದಿನಾಂಕ: 26.8.2011 ರಂದು ಈ ಸಾಕ್ಷಿಗಳ ಉಪಸ್ಥಿತಿಯಲ್ಲಿ ಪೊಲೀಸರು ಅವರ ಮುಂದೆ ಆಪಾದಿತಸಂಖ್ಯೆ: 1ನ್ನು ಹಾಜರುಪಡಿಸಿದಾಗ ಆಪಾದಿತಸಂಖ್ಯೆ: 1ದಿನಾಂಕ: 11.8.2011 ರಂದು ಮೃತಳ ಸದರಿ ಮನೆಗೆ ಬಂದ ವ್ಯಕ್ತಿಯೆಂದು ತಾವು ಗುರುತಿಸಿದಾಗಿ ಹೇಳಿಕೆ ನೀಡಿರುತ್ತಾರೆ ಮತ್ತುದಿನಾಂಕ: 28.8.2011 ರಂದು ಪೊಲೀಸ್ ಠಾಣೆಯಲ್ಲಿ ಅವರು ಆಪಾದಿತಸಂಖ್ಯೆ: 2 ನ್ನು ಗುರುತು ಹಿಡಿದಿದ್ದನ್ನು ಮತ್ತು ಆ ನಿರ್ದಿಷ್ಟ ದಿನದಂದು ಆಪಾದಿತಸಂಖ್ಯೆ: 2 ಆಗಿರುವ ವ್ಯಕ್ತಿಯೇ ಮೋಟಾರ್ ಸೈಕಲ್ ಚಲಾಯಿಸುತ್ತಿದ್ದ ವ್ಯಕ್ತಿಯಾಗಿದ್ದನು ಎಂಬುದನ್ನು ಸಹ ಈ ಸಾಕ್ಷಿದಾರರು ಗುರುತು ಹಿಡಿದಿರುವುದನ್ನು ಮತ್ತು ಆ ನಿರ್ದಿಷ್ಟ ಸಮಯದಲ್ಲಿ, ಈ ಸಾಕ್ಷಿದಾರರಿಗೆ ಆಪಾದಿತಸಂಖ್ಯೆ: 1 ರ ಹೆಸರು ತಿಳಿಯುತ್ತದೆ.

27. ಅಪೀಲುದಾರರ ಪರ ವಾದ ಮಂಡಿಸಿದ ಮಾನ್ಯ ನ್ಯಾಯವಾದಿಗಳು ಸಂಬಂಧಪಟ್ಟ ಆಪಾದಿತ ವ್ಯಕ್ತಿಗಳನ್ನು ಸಾಧ್ಯವಾದಷ್ಟು ಗುರುತು ಹಿಡಿಯುವುದಕ್ಕೆ ಸಂಬಂಧಿಸಿದಂತೆ ಆಪಾದಿತನನ್ನು ಗುರುತು ಹಿಡಿಯಲು ನಡೆಸುವ ಆಪಾದಿತ ವ್ಯಕ್ತಿಗಳ ಪ್ರದರ್ಶನದ ಪ್ರಕ್ರಿಯೆಯನ್ನು ಸರಿಯಾದ ರೀತಿಯಲ್ಲಿ ನಡೆಸಿರುವುದಿಲ್ಲ ಎಂಬ ಅಷ್ಟೇ ಗಂಭೀರವಾದ ಆಕ್ಷೇಪವನ್ನು ಈ ಮೊಕದ್ದಮೆಯೂ ಆಪಾದಿತಸಂಖ್ಯೆ: 1 ಮತ್ತು 2 ಅವರುಗಳು ಈ ಇಬ್ಬರೂ ಸಾಕ್ಷಿದಾರರಿಗೆ ಸಹ ವಾದದಲ್ಲಿ ನಿವೇದಿಸಿರುವರು.ಪರಿಚಯವಿತ್ತು ಎಂಬುದು ಪ್ರಾಸಿಕ್ಯೂಷನ್ನ ಮೊಕದ್ದಮೆಯಾಗಿರುವುದಿಲ್ಲ ಮತ್ತು ಆದ್ದರಿಂದ, ಗುರುತು ಹಿಡಿಯುವ ಪ್ರಶ್ನೆಯು ಇಲ್ಲಿ ಉಂಟಾಗುವುದಿಲ್ಲ.ಪೊಲೀಸು ಠಾಣೆಯಲ್ಲಿ ಆಪಾದಿತ ವ್ಯಕ್ತಿಗಳನ್ನು ತೋರಿಸಲಾಗಿದೆ ಮತ್ತು ನಿರ್ದಿಷ್ಟವಾಗಿ ಆಧಾರವಾಗಿ ಒದಗಿಸಿದ ಸಾಕ್ಷ್ಯದ ರೂಪವನ್ನು ಎಂದರೆ ಪೊಲೀಸರು ಸದರಿ ವ್ಯಕ್ತಿಗಳನ್ನು ಮೊಕದ್ದಮೆಯ ಆಪಾದಿತ ವ್ಯಕ್ತಿಗಳು ಎಂಬಂತೆಯೇ ತೋರಿಸಿರುವುದು ಇದರಿಂದ ಸ್ಪಷ್ಟವಾಗಿ ಪ್ರಕಟವಾಗಿದೆ.ಬಹುಶಃ ಪೊಲೀಸರು ಹೇಳಿದಂತೆಯೇ ಈ ಇಬ್ಬರು ಸಾಕ್ಷಿದಾರರು ಆ ನಿರ್ದಿಷ್ಟ ದಿನದಂದು ಮೃತಳ ಮನೆಗೆ ಬಂದಿದ್ದ ಆಪಾದಿತ ವ್ಯಕ್ತಿಗಳು ಇದೇ ವ್ಯಕ್ತಿಗಳು ಎಂದು ಗುರುತಿಸಿರುತ್ತಾರೆ ಎಂಬುದು ನ್ಯಾಯವಾದಿಗಳ ವಾದವಾಗಿದೆ.

28. ನ್ಯಾಯಾಲಯ ವಸ್ತುಗಳನ್ನು ವಶಪಡಿಸಿಕೊಂಡ ಸಂಬಂಧದಲ್ಲಿ ತನಿಖಾ ಏಜೆನ್ಸಿಯ ನಡವಳಿಕೆಯ ಮೇಲೆ ಸಂದೇಹವನ್ನು ವ್ಯಕ್ತಪಡಿಸಿರುವಾಗ, ನಮ್ಮ ಅಭಿಪ್ರಾಯದಲ್ಲಿ ಆಪಾದಿತಸಂಖ್ಯೆ: 1 ಈ ಅಪರಾಧದ ಸೂತ್ರಧಾರ ಅಪರಾಧಿ ಎಂಬ ನಿಶ್ಚಿತ ನಿರ್ಣಯಕ್ಕೆ ಬರಲು ಈ ನಿರ್ದಿಷ್ಟ ಸಂಗತಿಗಳನ್ನು ಅವಲಂಬಿಸುವುದು ಅಷ್ಟು ಸುರಕ್ಷಿತ ಕ್ರಮವಾಗಿರುವುದಿಲ್ಲ ಎಂಬುದು ನಮ್ಮ ಅಭಿವ್ಯಕ್ತಿಯಾಗಿದೆ.ನಿರ್ದಿಷ್ಟವಾಗಿ ಅಧಿ ವಿಚಾರಣಾ

ನ್ಯಾಯಾಲಯವು ಆಪಾದಿತಸಂಖ್ಯೆ: 2 ಕ್ಕೆ ಸಂಬಂಧಿಸಿದಂತೆ, ಈ ಎಲ್ಲಾ ಸಾಕ್ಷಿದಾರರ ಸಾಕ್ಷ್ಯಗಳನ್ನು ಆಧಾರವಾಗಿ ತೆಗೆದುಕೊಂಡಿರುವುದಿಲ್ಲ.ಘಟನೆಗೆ ಮುಂಚೆ ಆಪಾದಿತಸಂಖ್ಯೆ: 1 ಮತ್ತು 2 ರ ನಡವಳಿಕೆಗೆ ಸಂಬಂಧಿಸಿದ ಸಂಗತಿಗಳು ಅದೇ ರೀತಿಯಲ್ಲಿದೆ ಮತ್ತು ಆಪಾದಿತಸಂಖ್ಯೆ: 1 ಮತ್ತು 2 ಇವರುಗಳು ಘಟನೆಗೆ ಮುಂಚಿನ ನಡವಳಿಕೆಗೆ ಸಂಬಂಧಿಸಿದಂತೆ, ಅದೇ ಆಪಾದನೆಗಳಿಂದ ಮತ್ತು ಅದೇ ಸಾಕ್ಷ್ಯಾಧಾರಗಳಿಂದಲೇ ಆಪಾದಿತರ ವಿರುದ್ಧ ದಾವೆಯನ್ನು ಹೂಡಲಾಗಿದೆ.ಆಪಾದಿತ 1 ಮತ್ತು 2 ರ ಮುಂಚಿನ ನಡವಳಿಕೆಯು ಪ್ರತ್ಯೇಕವಾದ ವಿಷಯವಾಗಿರುವುದಿಲ್ಲ ಮತ್ತು ಆಪಾದಿತಸಂಖ್ಯೆ: 2 ಅಂದರೆ ಅಪರಾಧದಲ್ಲಿ ಒಬ್ಬನಾಗಿರುವ ನನಗೆ ನೀಡಿದ ಲಾಭಕ್ಕೆ ಮತ್ತು ಆಪಾದಿತಸಂಖ್ಯೆ: 1 ಅಂದರೆ ಇತರ ಅಪರಾಧಿ ವ್ಯಕ್ತಿಯನ್ನು ನ್ಯಾಯ ನಿರ್ಣೀತಗೊಳಿಸುವುದಕ್ಕಾಗಿ ಅದೇ ಸಾಕ್ಷ್ಯಾಧಾರಗಳನ್ನು ಆಧಾರವಾಗಿ ಅವಲಂಬಿತವಾಗಿದೆ.ಆದ್ದರಿಂದ, ನಮ್ಮ ಅಭಿಪ್ರಾಯದಲ್ಲಿ, ಆಪಾದಿತಸಂಖ್ಯೆ: 1 ಕ್ಕೂ ಸಹ ಸಂದೇಹದ ಲಾಭವನ್ನು ವಿಸ್ತರಿಸಬೇಕಾಗುತ್ತದೆ.ಆದ್ದರಿಂದ ಮೃತಳ ಮನೆಯ ಹತ್ತಿರ ಒಟ್ಟಿಗೆ ಇಬ್ಬರೂ ಅಪರಾಧಿಗಳನ್ನು ಕೊನೆಯಸಲ ಮನೆಯ ಒಳಗೆ ಹೋದದ್ದು ಮತ್ತು ಅರ್ಧ ಗಂಟೆಯ ತರುವಾಯ ಮನೆಯಿಂದ ಹೊರಬಂದದ್ದನ್ನು ನೋಡಿರುವುದಕ್ಕೆ ಅದರಲ್ಲೂ ಆರೋಪಿಸಂಖ್ಯೆ: 1 ಸಂಬಂಧದಲ್ಲಿ ಅವನನ್ನು ಮಾತ್ರವೇ ನೋಡಿದ ಬಗ್ಗೆ ಸಮರ್ಥವಾದ ಸಂಗತಿಗಳು ಇಲ್ಲಿ ಕಂಡುಬರುವುದಿಲ್ಲ.ಆದ್ದರಿಂದ, ಈ ಸಂಬಂಧದಲ್ಲಿ ನಮ್ಮ ಅಭಿವ್ಯಕ್ತಿ ಏನೆಂದರೆ ಮೇಲೆ ನಿರೂಪಿಸಿದಂತೆ ವಸ್ತುಗಳನ್ನು ವಶಪಡಿಸಿಕೊಂಡ ಸಂಬಂಧಿಸಿದಲ್ಲಿ ಸ್ವತಃ ಪ್ರಾಸಿಕ್ಯೂಷನ್ನ ಮೊಕದ್ದಮೆಯ ಮೇಲೆ ಸಂದೇಹ ಇರುವಾಗ, ಪ್ರಾಸಿಕ್ಯೂಷನ್ನ ಮೊಕದ್ದಮೆಯಲ್ಲಿ ಸಾಕ್ಷ್ಯ ಸಂಗತಿಗಳಾವುವು ಸಹ ಸಹಾಯಕ್ಕೆ ಬಂದಿಲ್ಲದಿರುವಾಗ ಪ್ರಾಸಿಕ್ಯೂಷನ್ನ ಮೊಕದ್ದಮೆಯನ್ನು ಸಂದೇಹಾತೀತವಾಗಿ ರುಜುವಾತುಪಡಿಸಿರುವರು ಎಂದು ಹೇಳಲು ಸಾಧ್ಯವಿಲ್ಲ ಎಂಬುದು ನಮ್ಮ ಅಭಿವ್ಯಕ್ತಿಯಾಗಿದೆ.

29. ಮುಂದಿನ ಸಂಗತಿಯಲ್ಲಿ ಘಟನೆ ನಡೆದ ಆ ಕೂಡಲೇ ಆಪಾದಿತಸಂಖ್ಯೆ: 1 ಮತ್ತು ಆಪಾದಿತಸಂಖ್ಯೆ: 2 ಇಬ್ಬರೂ ಆಪಾದಿತಸಂಖ್ಯೆ: 1 ಅವನಿಗೆ ಸೇರಿದ ಸ್ಥಳಕ್ಕೆ ಹೋಗಿರುವುದು ವಸ್ತುವಿಷಯವಾಗಿದೆ.ಪ್ರಾ.ಸಾ .14 ಆಗಿರುವ ಪ್ರದೀಪ್ ಕುಮಾರ್ ನೀಡಿದ ಹೇಳಿಕೆಯನ್ನುದಿನಾಂಕ: 10.8.2011 ರಂದು ಸಂಜೆ 6.30 ರ ಸುಮಾರಿಗೆ ಆಪಾದಿತಸಂಖ್ಯೆ: 1 ಅವನ ಜೊತೆ ಮಾತನಾಡಿದ್ದು ಮತ್ತು ಆರೋಪಿಸಂಖ್ಯೆ: 1 ಅವನಿಗೆ ರೂ .50,000/- ನೀಡಿದ್ದನ್ನು ಮತ್ತು ಅಪರಾಧಿಸಂಖ್ಯೆ: 1 ಇವನಿಗೆ ಸೇರಿದ ಭೂಮಿಯಲ್ಲಿ ಬೆಳೆದ ಅಡಿಕೆಯನ್ನು ಅಡಿಕೆ ಮರದಿಂದ ಕೊಯ್ದು ಹಾಕಲು ಮತ್ತು ತೆಗೆದುಕೊಂಡು ಹೋಗುವ ಉದ್ದೇಶದಿಂದ ಪ್ರಾ.ಸಾ .14 ಅಪರಾಧಿಸಂಖ್ಯೆ: 1 ಸೇರಿದ ಜಮೀನಿಗೆ ಹೋಗಿರುವ ವಿಚಾರವನ್ನು ಸವಿವರವಾಗಿ ಹೇಳಿಕೆ ನೀಡಿರುತ್ತಾನೆ.ತದನುಸಾರವಾಗಿಯೇದಿನಾಂಕ: 11.8.2011 ರಂದು ಈ ಸಾಕ್ಷಿದಾರರು ಮತ್ತು ಇತರೆ ಕೂಲಿಯಾಳುಗಳ ಜೊತೆಸಂಖ್ಯೆ: 1 ಅವನ ಜಮೀನಿಗೆ ಹೋಗಿ ಕೆಲಸ ಮಾಡುತ್ತಿರುವರು. ಅಂದು ಮಧ್ಯಾಹ್ನ 1 ಗಂಟೆ ಸುಮಾರಿಗೆ ಆಪಾದಿತಸಂಖ್ಯೆ: 1 ಮತ್ತು 2 ಮೋಟಾರ್ ಸೈಕಲ್ನಲ್ಲಿ ಕೆಲಸ ಮಾಡುತ್ತಿದ್ದ ಜಮೀನಿಗೆ ಬಂದಿರುತ್ತಾರೆ.ಆಪಾದಿತಸಂಖ್ಯೆ: 1 ಮೋಟಾರ್ ಸೈಕಲ್ನಿಂದ ಇಳಿಸಿದ ನಂತರ ಆಪಾದಿತಸಂಖ್ಯೆ: 2 ಆ ಸ್ಥಳದಿಂದ ಹೊರಟು ಹೋಗಿರುತ್ತಾನೆ.ವಾಸ್ತವವಾಗಿ ಈ ಸಾಕ್ಷಿದಾರರು ಆಪಾದಿತಸಂಖ್ಯೆ: 1 ಅವನೊಂದಿಗೆ ಮಾತನಾಡಿರುತ್ತಾನೆ ಮತ್ತು ಆತನನ್ನು ಎಲ್ಲಿಗೆ ಹೋಗಿದ್ದೇನೆಂದು ಪ್ರಶ್ನಿಸಿದಾಗ ಅದಕ್ಕೆ ಪ್ರತ್ಯುತ್ತರವಾಗಿ ಆಪಾದಿತಸಂಖ್ಯೆ: 1 ತಾನು ಆಪಾದಿತಸಂಖ್ಯೆ: 2 ರ ಜೊತೆಯಲ್ಲಿ ದೇವಸ್ಥಾನಕ್ಕೆ ಹೋಗಿರುವುದಾಗಿ ತಿಳಿಸಿರುತ್ತಾನೆ ಮತ್ತು ತದನಂತರ ಈ ಸಾಕ್ಷಿದಾರನು ಆ ನಿರ್ದಿಷ್ಟ ಸ್ಥಳದಿಂದ ಹೊರಟುಹೋಗಿರುತ್ತಾನೆ.ಈ ಸಾಕ್ಷಿದಾರನು ಆಪಾದಿತನು ಅಲ್ಲಿಗೆ ಬಂದಾಗ ಆತನ ಕೈಯಲ್ಲಿ ಒಂದು ಗಂಟಿತ್ತು ಎಂದಾಗಲಿ ಅಥವಾ ಆಪಾದಿತನು ಪಂಪ್ ಹೌಸ್ನ ಒಳಗೆ ಹೋದ ಬಗ್ಗೆಯಾಗಲೀ ಇತರೆ ವಿಷಯಗಳ ಬಗ್ಗೆಯಾಗಲೀ ಏನನ್ನು ಹೇಳಿರುವುದಿಲ್ಲ.ಅಂದರೆ ಅದೇ ದಿನ, ಆಪಾದಿತಸಂಖ್ಯೆ: 1 ಮಧ್ಯಾಹ್ನ ಸುಮಾರು 1 ಗಂಟೆಗೆ ತನ್ನ ಜಮೀನಿಗೆ ಬಂದಿರುತ್ತಾನೆ ಎಂಬುದನ್ನು ಗಂಟಿನೊಂದಿಗೆ ಅಪರಾಧ ಎಸಗಿದ ನಂತರದಲ್ಲಿ ಆಪಾದಿತಸಂಖ್ಯೆ: 1 ಮತ್ತು 2 ಇಬ್ಬರೂ ಆಭರಣದ ಗಂಟನ್ನು ಪಂಪ್ಹೌಸ್ನ ಒಳಗೆ ಇಡುವ ಉದ್ದೇಶದಿಂದಲೇ ಅಪರಾಧಿಸಂಖ್ಯೆ: 1 ಜಮೀನಿಗೆ ಅವರಿಬ್ಬರೂ ಬಂದಿರುತ್ತಾರೆ ಎಂಬ ಅಂಶದೊಂದಿಗೆ ಊಹೆ ಮಾಡುವುದು ಸರಿಯಾದ ಕ್ರಮವಾಗಿರುವುದಿಲ್ಲ.ಈ ಸಂಗತಿ ಸನ್ನಿವೇಶಗಳನ್ನು ಗಮನಕ್ಕೆ ತಂದುಕೊಂಡು ನಮ್ಮ ಅಭಿಪ್ರಾಯದಲ್ಲಿ ಆಪಾದಿತರು ಅಪರಾಧ ಎಸಗಿರುವುದನ್ನು ಮತ್ತು ನಿರ್ಣಾಯಕವಾಗಿ ಸುಸ್ಥಾಪಿಸಲು ಯಾವುದೇ ರೀತಿಯಲ್ಲಿ ಆ ಯಾವುದೇ ಸಂಗತಿ ಸನ್ನಿವೇಶಗಳನ್ನು ವಿರೂಪಗೊಳಿಸಲು ಸಾಧ್ಯವಿಲ್ಲ.ಆದ್ದರಿಂದ, ನಮ್ಮ ಅಭಿಪ್ರಾಯದಲ್ಲಿ ಈ ಸಂಗತಿ ಸನ್ನಿವೇಶಗಳು ಸಹ ಆಪಾದಿತರ ವಿರುದ್ಧ ಯಾವುದೇ ನ್ಯಾಯ ನಿರ್ಣಯವನ್ನು ತೆಗೆದುಕೊಳ್ಳುವುದಕ್ಕೆ ಯುಕ್ತವಾದ ಸಂಗತಿ ಸನ್ನಿವೇಶಗಳಾಗಿರುವುದಿಲ್ಲ.

30. ಮತ್ತೊಬ್ಬ ಸಾಕ್ಷಿಯಾಗಿರುವ ಪ್ರಾ.ಸಾ .15 ಆದ ಮಧು ಸಹಾ ಆಪಾದಿತನ ನಡವಳಿಕೆ ಬಗ್ಗೆ ಮತ್ತು ಆತನ ಹಿಂದಿನ ಉದ್ದೇಶದ ಬಗ್ಗೆಯೂ ಮಾತನಾಡಿರುತ್ತಾನೆ.ಪ್ರಾಸಿಕ್ಯೂಷನ್ ಈ ಮೊಕದ್ದಮೆಯಲ್ಲಿ ಘಟನೆ ನಡೆಯುವುದಕ್ಕೂ ಮುಂದೆ ಯಾವುದೋ ಒಂದು ಸಂದರ್ಭದಲ್ಲಿ, ಆಪಾದಿತಸಂಖ್ಯೆ: 1 ಈ ನಿರ್ದಿಷ್ಟ ಸಾಕ್ಷಿದಾರನನ್ನು ತನ್ನ ಜೊತೆಗೆ ಕರೆದುಕೊಂಡು ಹೋಗಿ ಮೃತಳ ಮನೆಯನ್ನು ತೋರಿಸುತ್ತಾನೆ ಮತ್ತು ಅದನ್ನು ಲಪಟಾಯಿಸುವ ಉದ್ದೇಶದಿಂದ ನಾವೊಬ್ಬರು ನಿರ್ದಿಷ್ಟ ಮಹಿಳೆಯ ಆಭರಣವನ್ನು ದರೋಡೆ ಮಾಡೋಣ ಎಂದು ಹೇಳಿರುತ್ತಾನೆ ಎಂಬುದು ಪ್ರಾ.ಸಾ .15 ನೀಡಿದ ಸಾಕ್ಷ್ಯವಾಗಿದೆ.ಆದರೆ ಸದರಿ ಉದ್ದೇಶಕ್ಕೆ ಆಪಾದಿತಸಂಖ್ಯೆ: 1 ರ ಜೊತೆ ಕೈ ಜೋಡಿಸಲು ಪ್ರಾ.ಸಾ .14 ಆದ ಪ್ರದೀಪ್ ಕುಮಾರ್ ನಿರಾಕರಿಸಿರುತ್ತಾನೆ.ಆಪಾದಿತಸಂಖ್ಯೆ: 1 ಈ ನಿರ್ದಿಷ್ಟ ದೃಷ್ಟಿಕೋನ ಮತ್ತು ಉದ್ದೇಶವನ್ನು ಅರಿತಿದ್ದರೂ ಸಹಾ ಈ ವಸ್ತು ವಿಷಯವನ್ನು ಪ್ರಾ.ಸಾ .14 ಯಾರ ಬಳಿಯೂ ಬಹಿರಂಗಪಡಿಸಿರುವುದಿಲ್ಲ ಮತ್ತು ಭವಿಷ್ಯದಲ್ಲಿ ಸಂಭವಿಸಬಹುದಾದ ಅಪರಾಧವನ್ನು ತಡೆಯುವ ಕ್ರಮವಾಗಿ ಆಪಾದಿತಸಂಖ್ಯೆ: 1 ರ ಉದ್ದೇಶದ ಬಗ್ಗೆ ಪೊಲೀಸರಿಗೂ ಸಹ ಮಾಹಿತಿಯನ್ನು ನೀಡಿರುವುದಿಲ್ಲ.ಆದ್ದರಿಂದ, ಆಪಾದಿತ ವ್ಯಕ್ತಿಗಳ ಪೂರ್ವದ ಉದ್ದೇಶವನ್ನು ಪ್ರಕಟಪಡಿಸುವುದಕ್ಕೆ ಪ್ರಾ.ಸಾ .14 ರ ನಡತೆಯನ್ನು ಆಧಾರವಾಗಿ ತೆಗೆದುಕೊಳ್ಳಲು ಸಾಧ್ಯವಾಗದು, ಅಲ್ಲದೇ, ಆಪಾದಿತಸಂಖ್ಯೆ: 1 ತನ್ನನ್ನು ಯಾವ ದಿನ, ಯಾವ ಸಮಯದಲ್ಲಿ ಅವನೊಂದಿಗೆ ಕರೆದುಕೊಂಡು ಹೋಗಿದ್ದನು, ಎಂಬ ವಸ್ತು ವಿಷಯವನ್ನು ಆತನು ಹೇಳಿರುವುದಿಲ್ಲ ಮತ್ತು ತದನಂತರ, ಕೊನೆಪಕ್ಷ ಈ ವಿಷಯದ ಬಗ್ಗೆ, ಮೃತ ಬಸಮ್ಮಳ ರಕ್ತ ಸಂಬಂಧಿಗಳಿಗೆ ಮಕ್ಕಳನ್ನು ಬಹಳ ಜಾಗರೂಕತೆಯಿಂದ ನೋಡಿಕೊಳ್ಳಿರೆಂದು ಎಚ್ಚರಿಕೆಯ ಮಾತುಗಳನ್ನು ಹೇಳಿರುವುದಿಲ್ಲ.ಪ್ರಾ.ಸಾ .14 ರ ನಡತೆಯು ಪ್ರಾಮಾಣಿಕವಾಗಿರುವುದಿಲ್ಲ ಮತ್ತು ಆ ಸಾಕ್ಷಿದಾರನ ಸಾಕ್ಷ್ಯವನ್ನು ಅಂಗೀಕರಿಸುವುದಕ್ಕೆ ನಂಬಿಕಾರ್ಹವಾದುದು ಆಗಿರುವುದಿಲ್ಲ.

31 (5) ಉದ್ದೇಶ:ಕೊನೆಯದಾದರೂ ಕನಿಷ್ಠವಾಗಿರದ ಸಂಗತಿಯೇ " ಉದ್ದೇಶವಾಗಿದೆ.ಪ್ರಾಸಿಕ್ಯೂಷನ್ ಪ್ರಕಾರ, ಆಪಾದಿತಸಂಖ್ಯೆ: 1 ಬ್ಯಾಂಕ್ ಮತ್ತು ಇತರ ಖಾಸಗಿ ವ್ಯಕ್ತಿಗಳಲ್ಲಿ ಬಹಳಷ್ಟು ಸಾಲ ಮಾಡಿರುತ್ತಾನೆ ಮತ್ತು ಅವನು ಈ ಸಾಲವನ್ನು ತೀರಿಸುವ ಉದ್ದೇಶದಿಂದ, ಮೃತಳಿಂದ ಆಭರಣವನ್ನು ದೋಚುವ ಅವಕಾಶಕ್ಕಾಗಿ ಕಾಯುತ್ತಿದ್ದಾನೆಂದು ಈ ಸಂದರ್ಭದಲ್ಲಿಯೇ ಮೃತಳ ಮರಣಕ್ಕೆ ಆಪಾದಿತಸಂಖ್ಯೆ: 1 ಕಾರಣವಾಗಿರುತ್ತಾನೆ.ಅದು ಅಲ್ಲದೆ, ಪ್ರಾ.ಸಾ .2, ಪ್ರಾ.ಸಾ .11 ಮತ್ತು ಪ್ರಾ.ಸಾ .13 ಪ್ರಾಸಿಕ್ಯೂಷನ್ ಸಾಕ್ಷಿದಾರರ ಆಧಾರವನ್ನು ನೀಡಿರುತ್ತಾರೆ.ಈ ಸಾಕ್ಷಿದಾರರು ಸಂಬಂಧಪಟ್ಟ ಆಪಾದಿತಸಂಖ್ಯೆ: 1 ಅವನಿಗೆ ಸ್ವಲ್ಪ ಪ್ರಮಾಣದ ಸಾಲ ಇದ್ದಿತ್ತೆಂದು ಹೇಳಿಕೆ ನೀಡಿರುತ್ತಾರೆ.ಮೊಕದ್ದಮೆಯಲ್ಲಿ ಆಪಾದಿತಸಂಖ್ಯೆ: 1 ಅವನ ತಂದೆಯು ಬ್ಯಾಂಕಿನಲ್ಲಿ ಸಾಲವನ್ನು ಮಾಡಿರುತ್ತಾರೆ.ಅದನ್ನು ಆಪಾದಿತಸಂಖ್ಯೆ: 1 ಆ ಸಾಲವನ್ನು ಸಂಪೂರ್ಣವಾಗಿ ತೀರಿಸಿರುವನು ಎಂದು ಪ್ರಾ.ಸಾ. 13 ಆದ ಬ್ಯಾಂಕ್ ಅಧಿಕಾರಿಯು ಹೇಳಿಕೆ ನೀಡಿರುತ್ತಾನೆ.ಆಪಾದಿತಸಂಖ್ಯೆ: 1 ರ ತಂದೆ ಬ್ಯಾಂಕಿನಲ್ಲಿ ಮಾಡಿದ ಸದರಿ ಸಾಲ ಆಪಾದಿತಸಂಖ್ಯೆ: 1 ತೀರಿಸಿರುತ್ತಾನೆ.ಆ ಸಂಬಂಧದಲ್ಲಿ ಸಾಲದ ವ್ಯವಹರಣೆಗಳು ನಡೆದಿರುತ್ತದೆ ಹಾಗೂ ಆಪಾದಿತಸಂಖ್ಯೆ: 1 ಗ್ರಾಮದಲ್ಲಿ ತನ್ನದೇ ಅಡಕೆ ತೋಟ ಮತ್ತು ಇನ್ನಿತರ ಜಮೀನನ್ನು ಹೊಂದಿದ್ದನು ಎಂಬುದು ಸ್ಪಷ್ಟವಾಗಿದೆ ಮತ್ತುದಿನಾಂಕ: 10.8.2011 ರ ಮುಂಚಿನ ದಿನದಂದೇ ಆಪಾದಿತಸಂಖ್ಯೆ: 1 ಪ್ರಾ.ಸಾ .14 ನಿಂದ ರೂ .50,000/-ಹಣವನ್ನು ಸ್ವೀಕರಿಸಿರುತ್ತಾನೆ.ಆದ್ದರಿಂದ, ಆರೋಪಿಯ ಆರ್ಥಿಕ ದುಸ್ಥಿತಿಯಿಂದ ಸದರಿ ಮಹಿಳೆಯನ್ನು ಕೊಲ್ಲುವ ಮತ್ತು ಆಕೆಯ ಒಡವೆಗಳನ್ನು ದೋಚುವ ಉದ್ದೇಶಕ್ಕಾಗಿ ಈ ದುಷ್ಕೃತ್ಯ ಮಾಡಲಾಗಿದೆ ಎಂಬ ಅಂಶವು ಇಲ್ಲಿ ಸಮರ್ಥನೀಯ ದುರ್ಬಲವಾಗಿದೆ ಎಂಬುದು ನಮ್ಮ ಅಭಿಪ್ರಾಯವಾಗಿದೆ ಮತ್ತು ಈ ಉದ್ದೇಶದಿಂದಲೇ ಆಪಾದಿತನು ಅಪರಾಧವೆಸಗಿದ್ದಾನೆ ಎಂಬ ನ್ಯಾಯನಿರ್ಣಯಕ್ಕೆ ಬರಲು ಇದು ಅಷ್ಟು ಸಮರ್ಥವಾದ ಅಂಶವಾಗಿ ಕಂಡು ಬರುವುದಿಲ್ಲ.ಆದ್ದರಿಂದ, ಉದ್ದೇಶದ ಅಂಶವನ್ನು ಕೆಲವೊಂದು ಆಯಾಮದಿಂದ ನೋಡಿದಾಗಲೂ ಸಹ ಆಪಾದಿತನು ಕೊಲೆ ಮತ್ತು ದರೋಡೆಯ ಅಪರಾಧವನ್ನು ಎಸಗಿದ್ದಾನೆ ಎಂಬ ನ್ಯಾಯ ನಿರ್ಣಯಕ್ಕೆ ಬರಲು ಅದೂ ಸಮರ್ಥವಾದ ಅಂಶವಾಗಿ ಕಂಡುಬರುವುದಿಲ್ಲ.ಮೇಲೆ ಹೇಳಿದ ಸದರಿ ವಾಸ್ತವಾಂಶಗಳನ್ನು ಮತ್ತು ಸಂಗತಿಗಳನ್ನು ಗಮನಿಸಿದಾಗ, ಪ್ರಾಸಿಕ್ಯೂಷನ್ ಮೊಕದ್ದಮೆಯನ್ನು ಸಂದೇಹಾತೀತವಾಗಿ ರುಜುವಾತುಪಡಿಸಿರುವುದಿಲ್ಲ ಎಂಬುದು ನಮ್ಮ ಅಭಿಪ್ರಾಯವಾಗಿದೆ.

32. ನ್ಯಾಯಾಲಯದ ಮುಂದೆ ವಿಚಾರಣೆಗೆ ಒಳಪಟ್ಟು ಇನ್ನಿತರ ಸಾಕ್ಷಿದಾರರು ಅಷ್ಟು ಪ್ರಮುಖವಾದ ಸಾಕ್ಷಿದಾರರು ಆಗಿರುವುದಿಲ್ಲ.ಪ್ರಾ.ಸಾ .5 ಸ್ಥಳ ಮಹಜರ್ ಆಗಿರುವ ನಿಶಾನೆ ಪಿ .2 ರ ಸಾಕ್ಷಿದಾರನಾಗಿರುತ್ತಾನೆ.ಪ್ರಾ.ಸಾ .17 ಪೊಲೀಸ್ ಪೇದೆಯಾಗಿದ್ದು, ಆಪಾದಿತಸಂಖ್ಯೆ: 2 ನ್ನು ಬಂಧಿಸಿದವನಾಗಿರುತ್ತಾನೆ.ಪ್ರಾ.ಸಾ. 18 ಮೃತ ದೇಹವನ್ನು ನಿಗಾವಣೆ ಮಾಡಿದ ಮತ್ತು ಶವ ಪಂಚನಾಮೆ

ಮಾಡಿದ ತರುವಾಯ ಮೃತ ದೇಹವನ್ನು ಸಾಗಿಸಿದ ವ್ಯಕ್ತಿಯಾಗಿರುತ್ತಾನೆ.ಪ್ರಾ.ಸಾ .19 ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ವಸ್ತುಗಳನ್ನು ಕಳುಹಿಸಿದ ವ್ಯಕ್ತಿಯಾಗಿದ್ದಾನೆ ಮತ್ತು ಪ್ರಾ.ಸಾ. 20 ದೂರನ್ನು ಸ್ವೀಕರಿಸಿದ ನಂತರ ದೂರನ್ನು ಕ್ರಿಮಿನಲ್ಸಂಖ್ಯೆ: 127/2011 ರಲ್ಲಿ ನೋಂದಾಯಿಸಿದ ಮತ್ತು ನ್ಯಾಯಾಲಯಕ್ಕೆ ಎಫ್.ಐ.ಆರ್ ನಿಶಾನೆ ಪಿ .12 ಅನ್ನು ಸಲ್ಲಿಸಿದ ವ್ಯಕ್ತಿಯಾಗಿರುತ್ತಾನೆ.

33. ಮೇಲೆ ಹೇಳಲಾದ ಸದರಿ ವಾಸ್ತವಿಕ ದೃಷ್ಟಿಕೋನ ಮತ್ತು ಸಾಕ್ಷ್ಯಾದಾರರು ಅಭಿಲೇಖಿಸಿದ ಸಮಗ್ರ ವಸ್ತು ವಿಷಯವನ್ನು ಮರು ವಿಶ್ಲೇಷಣೆಗೆ ಒಳಪಡಿಸಿ, ಗಮನಕ್ಕೆ ತಂದುಕೊಂಡು ನಮ್ಮ ಅಭಿವ್ಯಕ್ತಿಯ ಅಭಿಪ್ರಾಯ ಇದಾಗಿದೆ.ಪ್ರಾಸಿಕ್ಯೂಷನ್ ಸಂಗತಿಗಳನ್ನು ಸುಸ್ಥಾಪಿಸಲು ಪ್ರಯತ್ನಿಸಿರುವರು, ಆದರೆ ಅವರು ನ್ಯಾಯಾಲಯದ ಮನಸ್ಸಿನಲ್ಲಿ ಸಂಶಯವನ್ನು ಸೃಜಿಸಲು ಮಾತ್ರವೇ ಯಶಸ್ವಿಯಾಗಿರುವ ಸಂಶಯವನ್ನು ಸಮರ್ಪಕವಾಗಿ ಸ್ಪಷ್ಟಪಡಿಸಿರುವುದಿಲ್ಲ ಮತ್ತು ವಿವರಿಸಿರುವುದಿಲ್ಲ.ಸಂಶಯದ ಪ್ರಮಾಣವು ಎಷ್ಟು ಪ್ರಬಲವಾಗಿದ್ದರೂ ಸಹ ಅದು ಸಾಕ್ಷಿಯ ಜಾಗವನ್ನು ಪಡೆದುಕೊಳ್ಳಲು ಸಾಧ್ಯವಿಲ್ಲ.ಅಪರಾಧದಲ್ಲಿ ' ಮೊಕದ್ದಮೆಯನ್ನು ರುಜುವಾತು ಪಡಿಸಬೇಕಾಗಿತ್ತು ಮತ್ತು ಮೊಕದ್ದಮೆಯನ್ನು ರುಜುವಾತುಪಡಿಸಿರಬಹುದಾಗಿತ್ತು 9 ಎಂಬುದರಲ್ಲಿ ಪದಾವಳಿಗಳ ನಡುವೆ ಸಾಕಷ್ಟು ಅಂತರವಿದೆ ಎಂಬುದನ್ನು ಯುಕ್ತವಾಗಿ ನಿರ್ವಚನಗೊಳಿಸಲಾಗಿದೆ.ಪ್ರಾಸಿಕ್ಯೂಷನ್ ಮೊಕದ್ದಮೆಯನ್ನು ಸಂದೇಹಾತೀತವಾಗಿ ರುಜುವಾತುಪಡಿಸಬೇಕಾಗಿತ್ತು ಎಂಬುದು ದೀರ್ಘ ಪರಿಶೀಲನಾ ತತ್ವವಾಗಿದೆ.ಪ್ರಾಸಿಕ್ಯೂಷನ್ ವಾಸ್ತವವಾಗಿ ಮೊಕದ್ದಮೆಯನ್ನು ದುರ್ಬಲಗೊಳಿಸುವ ಯಾವುದೇ ಸಂಶಯವನ್ನು ಯುಕ್ತವಾಗಿ ನಿವಾರಿಸುವುದನ್ನು ಅಥವಾ ಅಂಥ ತನಿಖೆಯಲ್ಲಿನ ನ್ಯಾಯಯುತ ಸಂದೇಹವು ಯುಕ್ತವಾಗಿರುವುದನ್ನು ರುಜುವಾತುಪಡಿಸದ ಹೊರತು ನ್ಯಾಯಾಲಯವು ಪ್ರಾಸಿಕ್ಯೂಷನ್ ಹೇಳುವ ಕಥೆಯೇ ಪರಮ ಸತ್ಯವೆಂದು ನಂಬುವ ಅಗತ್ಯವಿಲ್ಲ.ಆದ್ದರಿಂದ, ನ್ಯಾಯಾಲಯವು ಆಪಾದಿತಸಂಖ್ಯೆ: 2 ಕ್ಕೆ ಸಂಶಯದ ಲಾಭವನ್ನು ನೀಡಿದ್ದರೆ, ಆಪಾದಿತಸಂಖ್ಯೆ: 1 ಅವನಿಗೂ ಸಹ ಸಂಶಯದ ಲಾಭವನ್ನು ನೀಡತಕ್ಕದ್ದು.ಆದ್ದರಿಂದ ನಮ್ಮ ಅಭಿಪ್ರಾಯದಲ್ಲಿ ಪ್ರಾಸಿಕ್ಯೂಷನ್ ಮೊಕದ್ದಮೆಯನ್ನು ಸಂದೇಹಾತೀತವಾಗಿ ರುಜುವಾತುಪಡಿಸದ ಆಧಾರದ ಮೇಲೆ, ಸದರಿ ಅನುಮಾನದ ಲಾಭವನ್ನು ಆಪಾದಿತಸಂಖ್ಯೆ: 1 ಕ್ಕೂ ಸಹ ವಿಸ್ತರಿಸಬಹುದು ಎಂಬುದು ನಮ್ಮ ನಿರ್ಣಯವಾಗಿದೆ.

34. ನ್ಯಾಯ ನಿರ್ಣಯ ಮಾಡುವ ಮುಂಚೆ, ನಾವು ವಿಚಾರಣಾಧೀನ ನ್ಯಾಯಾಲಯದ ಮುಂದೆ ಹಾಜರುಪಡಿಸಲಾದ ಸಿಡಿ ಹಾಗೂ ಸಾಕ್ಷ್ಯಾಧಾರದ ಪತ್ರಗಳೆಲ್ಲವನ್ನು ವಿಚಾರಣಾಧೀನ ನ್ಯಾಯಾಲಯದ ಸಿಬ್ಬಂದಿಗಳು ಎಲ್ಲ ದಸ್ತಾವೇಜುಗಳನ್ನು ಒಟ್ಟುಗೂಡಿಸಿ ಪುಸ್ತಕದ ರೀತಿಯಲ್ಲಿ ಹೊಲಿದು ಸೇರಿಸಿ ಹಾಜರುಪಡಿಸಿದ ದಸ್ತಾವೇಜುಗಳನ್ನು ಸವಿವರವಾಗಿ ಪರಿಶೀಲಿಸಿರುತ್ತೇವೆ.ನ್ಯಾಯಾಲಯದ ಮುಂದೆ ಮೂಲ ಡಿಸ್ಕನ್ನು ಪ್ರದರ್ಶಿಸಿದ ಸಂದರ್ಭದಲ್ಲಿ ಫೈಲನ್ನು ಎರಡು ಬಾರಿ ತೆರೆಯಲಾಯಿತು ಮತ್ತು ಸದರಿ ವಿಡಿಯೋ ಚಿತ್ರೀಕರಣವನ್ನು ಸಂಪೂರ್ಣ ವೀಕ್ಷಿಸಲು ನಮಗೆ ಸಾಧ್ಯವಾಯಿತು.ಆದರೆ ಆನಂತರದಲ್ಲಿ, ಅದನ್ನು ಮತ್ತೊಮ್ಮೆ ಪ್ರದರ್ಶನ ಮಾಡಿದಾಗ ಗಣಕಯಂತ್ರದಲ್ಲಿ ಆ ವಿಡಿಯೋ ಚಿತ್ರೀಕರಣದ ಫೈಲ್ ತೆರೆದುಕೊಳ್ಳಲಿಲ್ಲ ಕಾರಣವೇನೆಂದರೆ ಅಧಿವಿಚಾರಣಾ ನ್ಯಾಯಾಲಯದ ಸಿಬ್ಬಂದಿ ಸಾಕ್ಷ್ಯಾಧಾರದ ದಸ್ತಾವೇಜುಗಳನ್ನು ಹೊಲಿದಿರುವ ಪರಿಣಾಮ ಫೈಲು ತೆರೆದುಕೊಳ್ಳಲು ಸಾಧ್ಯವಾಗಲಿಲ್ಲ.ಆದ್ದರಿಂದ, ನಾವು ಅಧಿವಿಚಾರಣಾ ನ್ಯಾಯಾಲಯಕ್ಕೆ ಅದು ಅಂಗೀಕರಿಸುವ ಯಾವುದೇ ರೀತಿಯ ವಿದ್ಯುನ್ಮಾನ ಸಾಕ್ಷ್ಯಾಧಾರವನ್ನು ಮೊಕದ್ದಮೆಯು ತರ್ಕಬದ್ಧವಾಗಿ ಮುಕ್ತಾಯಗೊಳ್ಳುವವರೆಗೆ ಆ ವಿದ್ಯುನ್ಮಾನ ಸಾಕ್ಷ್ಯಾಧಾರವನ್ನು ವ್ಯವಸ್ಥಿತವಾಗಿ ಸಂರಕ್ಷಿಸುವುದಕ್ಕೆ ಅತ್ಯಧಿಕ ಜಾಗರೂಕತೆಯನ್ನು ವಹಿಸಬೇಕು ಎಂದು ಅಧಿವಿಚಾರಣಾ ನ್ಯಾಯಾಲಯಕ್ಕೆ ನಿರ್ದೇಶಿಸುತ್ತೇವೆ.ಹಾಗೆಯೇ ತನಿಖೆಯ ಅಧಿಕಾರಿಗಳು ತಾವು ನಡೆಸುವ ತನಿಖೆಯ ಸಂದರ್ಭದಲ್ಲಿ ಸಂಗ್ರಹಿಸುವ ವಿದ್ಯುನ್ಮಾನ ಸಾಕ್ಷ್ಯಾಧಾರಗಳನ್ನು ಯುಕ್ತವಾದ ರೀತಿಯಲ್ಲಿ ಸಂರಕ್ಷಿಸುವುದಕ್ಕೂ ನಿರ್ದೇಶಿಸುತ್ತೇವೆ ಮತ್ತು ವಿದ್ಯುನ್ಮಾನ ಆಂಟಿ ಸ್ಟ್ಯಾಟಿಕ್ ವಿದ್ಯುಚ್ಛಕ್ತಿ ನಿರೋಧಕ ಇಡತಕ್ಕದ್ದು.ಲಕೋಟೆಯನ್ನು ಉಷ್ಣತೆ ಸ್ಥಳಗಳಿಂದ ದೂರ ಇರಿಸಬೇಕೆಂದು ತಮ್ಮ ಅಭಿರಕ್ಷೆಯಲ್ಲಿ ಇಟ್ಟುಕೊಳ್ಳಬೇಕೆಂದು ನಿರ್ದೇಶಿಸುತ್ತೇವೆ.ಆದ್ದರಿಂದ ಇದಕ್ಕೆ ಸಂಬಂಧಿಸಿದಂತೆ, ನಾವು ಕೆಲವು ಮಾರ್ಗದರ್ಶಿ ಸೂತ್ರಗಳನ್ನು ನೀಡಲು ಬಯಸುತ್ತೇವೆ ಮತ್ತು ಅವು ಈ ಕೆಳಗಿನಂತಿವೆ:

( 1) ಶೋಧನೆ, ಜಪ್ತಿ, ಪ್ಯಾಕ್ ಮಾಡುವ, ಲೇಬಲ್ ಅಂಟಿಸುವ ಡಿಜಿಟಲ್ (ಅಂಕೀಯ) ಸಾಕ್ಷ್ಯಗಳನ್ನು ತಜ್ಞರಿಗೆ ಕಳುಹಿಸುವ ಪ್ರತಿಯೊಂದು ಹಂತದಲ್ಲಿಯ ಸ ಂ ಬ ಂ ಧ ಪಟ್ಟವರು ಸಮರ್ಪಕ ಮುನ್ನೆಚ್ಚರಿಕೆಗಳು ಕ್ರಮಗಳನ್ನು ತೆಗೆದುಕೊಳ್ಳಬೇಕು, ವಿಚಾರಣಾಧೀನ ನ್ಯಾಯಾಲಯಕ್ಕೆ ಂ ಯುಕ್ತ ಅಭಿ ರಕ್ಷೆಗೆ ಸಲ್ಲಿಸುವುದು.

( 2) ತನಿಖಾ ಏಜೆನ್ಸಿ ಎಲೆಕ್ಟ್ರಾನಿಕ್ಸ್ ಸಲಕರಣೆಗಳನ್ನು ಜಪ್ತಿ ಮಾಡುವ ಮುಂಚೆ ಅವುಗಳ ಭದ್ರತಾ ವ್ಯವಸ್ಥೆಗಳಾದ ಪಿನ್, ಪಾಸ್ವರ್ಡ್, ಪ್ಯಾಟರ್ನ್, ಲಾಕ್, ಫಿಂಗರ್ ಲಾಕ್ ಮತ್ತು ಮುಂತಾದವುಗಳನ್ನು ಅಸಮರ್ಥಗೊಳಿಸಬೇಕು.ಏಕೆ ಂ ದರೆ ಮುಂದೆ ಅವುಗಳನ್ನು ಅವಲೋಕಿಸುವ ವಿಶ್ಲೇಷಣೆ ಮಾಡಲೇಬೇಕಾದ ಯಾವುದೇ ಹಂತದಲ್ಲಿ ಆ ಭದ್ರತಾ ವ್ಯವಸ್ಥೆಗಳಿಂದ ಅಡಚಣೆ ಉಂಟಾಗದಂತೆ ಕ್ರಮ ವಹಿಸುವುದು.

( 3) ತನಿಖಾಧಿಕಾರಿಯು ವಿದ್ಯುನ್ಮಾನ ದಾಖಲೆಯನ್ನು ಒಳಗೊಂಡ ಸಾಧನವನ್ನು ನ್ಯಾಯಾಲಯಕ್ಕೆ ಮೊಹರು ಮಾಡಿದ ಮತ್ತು ಸುರಕ್ಷಿತ ರೀತಿಯಲ್ಲಿ, ಸಲ್ಲಿಸತಕ್ಕದ್ದು.ಅದಕ್ಕೂ ಮುಂಚೆ, ಸದರಿ ತನಿಖಾಧಿಕಾರಿಯು ತನ್ನ ಗಣಕಯಂತ್ರದಲ್ಲಾಗಲೀ, ಸಿಡಿಯ ಮೂಲಕವಾಗಲಿ ಅಥವಾ ಯಾವುದೇ ವಿದ್ಯುನ್ಮಾನ ಗ್ಯಾಜೆಟ್ ಮೂಲಕವಾಗಲಿ ಸದರಿ ವಿದ್ಯುನ್ಮಾನ ಸಾಕ್ಷ್ಯದ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವ ಮುಂಚೆಯೇ ಸಂರಕ್ಷಿಸಿ ಇಟ್ಟುಕೊಂಡಿರಬೇಕು.ಏಕೆಂದರೆ, ಈ ಸಾಕ್ಷ್ಯಾಧಾರಗಳು ಯಾವುದೇ ಕಾರಣದಿಂದ ನಾಶವಾಗಿರುವ ಅಥವಾ ಹಾಳಾಗಿರುವ ಪಕ್ಷದಲ್ಲಿ, ಪೊಲೀಸರು ಸಂರಕ್ಷಿಸಿದ ಆ ಯಾವುದೇ ಸಾಕ್ಷ್ಯಾಧಾರದ ಪ್ರತಿಗಳು ವಿಚಾರಣಾಧೀನ ನ್ಯಾಯಾಲಯದ ಮುಂದೆ ಗೌಣ ಸಾಕ್ಷ್ಯವಾಗಿ ಬಳಕೆಯಾಗುವುದರಿಂದ ತನಿಖಾಧಿಕಾರಿಯು ಈ ಎಲ್ಲಾ ವಿದ್ಯುನ್ಮಾನ ಸಾಕ್ಷ್ಯಾಧಾರಗಳ ಪ್ರತಿಯನ್ನು ತನ್ನಲ್ಲಿ ಸಂರಕ್ಷಿಸಿಟ್ಟುಕೊಂಡಿರಬೇಕು.

( 4) ಅಡಕ ಮುದ್ರಿಕೆ/ಡಿ.ವಿ.ಡಿ./ಪೆನ್ಡ್ರೈವ್| ದೃಢಮುದ್ರಿಕೆ| (ಹಾರ್ಡ್ ಡಿಸ್ಕ್)/ಕಾಂತೀಯ ಸಾಧನ (ಮ್ಯಾಗ್ನೆಟಿಕ್ ಡಿವೈಸ್) ಮುಂತಾದ ಇನ್ನಿತರ ವಿದ್ಯುನ್ಮಾನ ಸಾಧನಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸುವ ಮು ಂ ಚೆ ಅವುಗಳನ್ನು ಆದ್ರ್ರತೆ ಮತ್ತು ಉಷ್ಣತೆಗಳಿಂದ ಸಂರಕ್ಷಿಸುವ ವಿದ್ಯುಚ್ಛಕ್ತಿ ನಿರೋಧಕ (ಆಂಟಿ ಸ್ಟಾಟಿಕ್) ಲಕೋಟೆಯಲ್ಲಿ ಯುಕ್ತ ರೀತಿಯಲ್ಲಿ ಸಂರಕ್ಷಿಸಿಡತಕ್ಕದ್ದು ಮತ್ತು ನ್ಯಾಯಾಲಯವು ಈ ಸಾಧನಗಳನ್ನು ಸ್ವೀಕರಿಸಿದ ನಂತರದಲ್ಲಿ ನ್ಯಾಯಾಲಯವು ಸದರಿ ಸಾಕ್ಷ್ಯಗಳನ್ನು ಅಂಗೀಕರಿಸುವವರೆಗೂ ಅವುಗಳನ್ನು ಪರಿಶೀಲಿಸುವ ಕಾಲಾವಧಿಯವರೆಗೂ ಅವುಗಳನ್ನು ಯುಕ್ತ ರೀತಿಯಲ್ಲಿ ಸಂರಕ್ಷಿಸಿಟ್ಟುಕೊಳ್ಳತಕ್ಕದ್ದು.

( 5) ಅಂಥ ವಿದ್ಯುನ್ಮಾನ ಸಲಕರಣೆಗಳನ್ನು, ವಿದ್ಯುನ್ಮಾನ ಕಡತಗಳನ್ನು ನಿರ್ವಹಿಸುವಾಗ ಪ್ಯಾಕ್ ಮಾಡುವಾಗ, ಯಾವುದೇ ರೀತಿಯಲ್ಲೂ ಹಾನಿಯಾಗದಿರುವುದನ್ನು (ಗಾಜಿನ ವಸ್ತುಗಳಾಗಿದ್ದರೆ) ಅವುಗಳ ಮೇಲೆ ಗೀರು-ಗೆರೆಗಳು ಉಂಟಾಗದಿರುವುದನ್ನು ಸುನಿಶ್ಚಿತಪಡಿಸಿಕೊಳ್ಳತಕ್ಕದ್ದು.

( 6) ಸಂಬಂಧಪಟ್ಟ ಸರ್ಕಾರಿ ಪ್ರಾಧಿಕಾರಗಳು ಮತ್ತು ಉಚ್ಚ ಎ ನ್ಯಾಯಾಲಯ ಸದರಿ ವಿದ್ಯುನ್ಮಾನ ಸಾಧನಗಳನ್ನು ಅವುಗಳ ಘಟಕಾಂಶಗಳನ್ನು ಸಂರಕ್ಷಿಸಲು, ಅವುಗಳನ್ನು ಅಗತ್ಯವಿರುವಾಗ ಹಾಜರುಪಡಿಸಲು ಮೊಕದ್ದಮೆಯು ತಾತ್ವಿಕವಾಗಿ ಪೂರ್ಣಗೊಳ್ಳುವವರೆವಿಗೂ, ನ್ಯಾಯಾಲಯ ಕೋರಿದಾಗಲೆಲ್ಲ ಅವುಗಳನ್ನು ಒದಗಿಸುವುದಕ್ಕಾಗಿ ಹಾಗೂ ಅವುಗಳನ್ನು ಯಾವ ರೀತಿಯಲ್ಲಿ ಪ್ಯಾಕ್ ಮಾಡಬೇಕು, ಸಂರಕ್ಷಿಸಬೇಕು ಎಂಬುದರ ಬಗ್ಗೆ ಹಾಗೂ ಸದರಿ ವಿದ್ಯುನ್ಮಾನ ಸಾಧನಗಳ ಘಟಕಾಂಶಗಳ ಹೆಚ್ಚಿನ ಬಳಕೆಗೆ ಮತ್ತು ಪುರ್ನಬಳಕೆಯ ಬಗ್ಗೆ ತನಿಖಾಧಿಕಾರಿಯನ್ನು ಒಳಗೊಂಡಂತೆ ಸಂಬಂಧಪಟ್ಟ ಸಿಬ್ಬಂದಿಗೆ ನ್ಯಾಯಿಕ ಅಧಿಕಾರಿಗಳಿಗೆ ಮತ್ತು ನ್ಯಾಯಾಲಯದ ಸಿಬ್ಬಂದಿಗೆ ಯುಕ್ತವಾದ ತರಬೇತಿಯನ್ನು ಒದಗಿಸುವುದಕ್ಕೆ ಕಟ್ಟುನಿಟ್ಟಾದ ಕ್ರಮಗಳನ್ನು ತೆಗೆದುಕೊಳ್ಳುವುದು.

( 7) ವಿದ್ಯುನ್ಮಾನ ದಾಖಲೆಯ ಪ್ರತಿಯನ್ನು ಸರ್ವ್ರನಲ್ಲಿ ಅಥವಾ ಸಂಬಂಧಿತ ಪೊಲೀಸ್ ಠಾಣೆಯ ಗಣಕಯಂತ್ರದಲ್ಲಿ ಅಥವಾ ಸಂಬಂಧಪಟ್ಟ ತನಿಖಾಧಿಕಾರಿಗೆ ಒದಗಿಸಲಾದ ಗಣಕಯಂತ್ರದಲ್ಲಿ ಇಟ್ಟಿರತಕ್ಕದ್ದು ಮತ್ತು ಪರ್ಯಾಯ ಪ್ರತಿಯ ರೂಪದಲ್ಲಿ ಸದರಿ ದಾಖಲೆಯ ಪ್ರತಿಯನ್ನು ಸಂಬಂಧಪಟ್ಟ ನ್ಯಾಯಾಲಯಕ್ಕೆ ಒದಗಿಸಿದ ಗಣಕಯಂತ್ರಲ್ಲೂ ಸಹ ಇಟ್ಟಿರತಕ್ಕದ್ದು.ಈ ಸಂಬಂಧದಲ್ಲಿ ಇದಕ್ಕೆ ಸಂಬಂಧಿಸಿದಂತೆ, ವ್ಯವಹರಣೆಯ ದಾಖಲೆ ಪತ್ರದಲ್ಲಿ ಅಥವಾ ಮೊಕದ್ದಮೆಯ ದಿನಚರಿಯಲ್ಲಿ ಸಂದರ್ಭಾನುಸಾರ ಹಿಂಬರಹವನ್ನು ಸಹ ಪಡೆದುಕೊಳ್ಳತಕ್ಕದ್ದು.

( 8) ಸಾಕ್ಷ್ಯವಾಗಿ ಸ್ವೀಕರಿಸಿದ ವಿದ್ಯುನ್ಮಾನ ದಾಖಲೆಯನ್ನು ಸಾಧ್ಯವಾದಷ್ಟು ಬೇಗನೆ ಸದರಿ ಮೊಕದ್ದಮೆಯ ಸಂಬಂಧಪಟ್ಟ ಕಡತಕೋಶದಲ್ಲಿ (ಫೋಲ್ಡರ್) ಸುಸಂಗತ ಭಾಗದ ಪ್ರತಿಯನ್ನು ಪ್ರತ್ಯೇಕ ಸಾಧನದಲ್ಲಿ ಸಂಗ್ರಹಿಸಿಟ್ಟುಕೊಳ್ಳತಕ್ಕದ್ದು ಮತ್ತು ಹೆಚ್ಚಿನ ಉಲ್ಲೇಖಕ್ಕಾಗಿ ಗಣಕಯಂತ್ರದಲ್ಲಿ ಪರ್ಯಾಯ ಪ್ರತಿಯಾಗಿ ಪ್ರತ್ಯೇಕ ವಿದ್ಯುನ್ಮಾನ ಸಾಧನವನ್ನು (ಡ್ರೈವ್ನಲ್ಲಿ) ಸಂಗ್ರಹಿಸಿಡತಕ್ಕದ್ದು.ಯಾವುದೇ ಕಾರಣದಿಂದ ದೃಢಮುದ್ರಿಕೆ/ಅಡಕ ಮುದ್ರಿಕೆಯೂ ನಾಶಗೊಂಡರೆ ಅಥವಾ ಹಾಳಾದರೆ ಅಥವಾ ಓದಲು ಸಾಧ್ಯವಾಗದಿರುವ ಸ ಂ ದರ್ಭದಲ್ಲಿ ಸಂಗ್ರಹಿಸಿಟ್ಟುಕೊಂಡ ಪರ್ಯಾಯ ಪ್ರತಿಯೂ ಬಳಕೆಗೆ ಬರುತ್ತದೆ.

( 9) ವಿದ್ಯುನ್ಮಾನ ಸಾಧನಗಳನ್ನು ಮೊಕದ್ದಮೆಯು ತಾರ್ಕಿಕವಾಗಿ ಅಂತ್ಯಗೊಳ್ಳುವವರೆಗೆ, ಯುಕ್ತ ರೀತಿಯಲ್ಲಿ ಸಂರಕ್ಷಿಸುವುದಕ್ಕೆ ನಿರ್ದೇಶನ ನೀಡುವುದರೊಂದಿಗೆ ನ್ಯಾಯಾಲಯದ ಮುಖ್ಯ ಲಿಖಿತ ಕಾರ್ಯಾಲಯದಲ್ಲಿ ಸುರಕ್ಷಿತವಾಗಿ ಸಂಗ್ರಹಿಸಿಡತಕ್ಕದ್ದು.

(10) ಸಾಧ್ಯವಾದರೆ (ಎಫ್.ಎಸ್.ಎಲ್.) ನ ವಿಧಿ ವಿಜ್ಞಾನ ಪ್ರಯೋಗಾಲಯ ತಜ್ಞರು ಸಹ ಸಾಕ್ಷ್ಯದ ಮೌಲ್ಯದೊಂದಿಗೆ, ಯುಕ್ತ ಚೀಟಿಯನ್ನು ಅಂಟಿಸುವುದರೊಂದಿಗೆ ನಿಜರೂಪದ ಪ್ರತಿಯನ್ನು, ಉದ್ಧೃತ ದತ್ತಾಂಶ ಸಂರಕ್ಷಿಸಿಡತಕ್ಕದ್ದು.ಅದನ್ನು ಆ ಯಾವುದೇ ಸಮಯದಲ್ಲಿ ಗೌಣ ಸಾಕ್ಷ್ಯವಾಗಿ ಬಳಸಬಹುದು.

35. ಮೇಲೆ ಹೇಳಲಾದ ಸದರಿ ಸಂಗತಿಗಳು ಮತ್ತು ಸನ್ನಿವೇಶಗಳನ್ನು ಗಮನದಲ್ಲಿಟ್ಟುಕೊಂಡು ನಾವು, ಈ ಮುಂದಿನಂತೆ ಆದೇಶ ಹೊರಡಿಸುತ್ತಿದ್ದೇವೆ.

ಆದೇಶ

( 1) ಈ ಅಪೀಲನ್ನು ಪುರಸ್ಕರಿಸಲಾಗಿದೆ.ತತ್ಪರಿಣಾಮವಾಗಿ, ಸತ್ರ ನ್ಯಾಯಾಧೀಶ- I ತ್ವರಿತ ನ್ಯಾಯಾಲಯ, ಶಿವಮೊಗ್ಗ, ಇವರು ಎಸ್.ಸಿ.ಸಂಖ್ಯೆ: 78/2012 ರಲ್ಲಿದಿನಾಂಕ: 14/15.3.2013 ರಂದು ಹೊರಡಿಸಿದ ಅಪರಾಧ ನಿರ್ಣಯದ ತೀರ್ಪನ್ನು ಮತ್ತು ದಂಡನೆಯ ಆದೇಶವನ್ನು ಈ ಮೂಲಕ ರದ್ದುಗೊಳಿಸಲಾಗಿದೆ.ಆಪಾದಿತಸಂಖ್ಯೆ: 1 ಆಗಿರುವ ಮಧುಕರ್ ಅಲಿಯಾಸ್ ಮಧು ಅಲಿಯಾಸ್ ಮಲ್ಲೇಶ್ - ವಿರುದ್ಧ ಭಾರತ ದಂಡ ಸಂಹಿತೆಯ 397 ನೇ ಪ್ರಕರಣವನ್ನು ಓದಿಕೊಳ್ಳುವುದರೊಂದಿಗೆ 302, 394 ನೇ ಪ್ರಕರಣದ ಅಡಿಯಲ್ಲಿ ದಂಡನೀಯ ಅಪರಾಧಕ್ಕಾಗಿ ಆರೋಪಿಸಲಾದ ಆರೋಪಗಳನ್ನು ಈ ಮೂಲಕ ರದ್ದುಗೊಳಿಸಿ ಆಪಾದಿತ ಸ ಂ ಖ್ಯೆ:1 ಅನ್ನು ಅನ್ನು ಈ ಆರೋಪಗಳಿ ಂ ದ ಖುಲಾಸೆಗೊಳಿಸಲಾಗಿದೆ.

( 2) ಆಪಾದಿತಸಂಖ್ಯೆ: 1 ಆದ ಮಧುಕರ ಅಲಿಯಾಸ್ ಮಧು ಅಲಿಯಾಸ್ ಮಲ್ಲೇಶ್ನು ಯಾವುದೇ ಇತರೆ ಮೊಕದ್ದಮೆಗೆ ಅಗತ್ಯವಿರದ ಪಕ್ಷದಲ್ಲಿ, ಈ ಕೂಡಲೇ ಅವನನ್ನು ಬಂಧನದಿಂದ ಬಿಡುಗಡೆಗೊಳಿಸಲು ಆದೇಶಿಸಲಾಗಿದೆ.

( 3) ಆಪಾದಿತಸಂಖ್ಯೆ: 1 ಆದ ಮಧುಕರ ಅಲಿಯಾಸ್ ಮಧು ಅಲಿಯಾಸ್ ಮಲ್ಲೇಶ್ನನ್ನು ಈ ಕೂಡಲೇ ಬಂಧನದಿಂದ ಬಿಡುಗಡೆಗೊಳಿಸುವುದಕ್ಕೆ ಸ ಂ ಬ ಂ ಧ ಪಟ್ಟ ಕಾರಾಗೃಹ ಎ ಪ್ರಾಧಿಕಾರಿಗೆ ಮಾಹಿತಿಯನ್ನು ತಿಳಿಸುವುದಕ್ಕೆ ಈ ಮೂಲಕ ರಿಜಿಸ್ಟ್ರಿಗೆ ನಿರ್ದೇಶಿಸಲಾಗಿದೆ.

( 4) ಆಪಾದಿತನು ಈಗಾಗಲೇ ಜುಲ್ಮಾನೆ ಮೊತ್ತವನ್ನು ಠೇವಣಿ ಮಾಡಿದ್ದಲ್ಲಿ, ಅದನ್ನು ಅವನಿಗೆ ಮರು ಸಂದಾಯ ಮಾಡಿ ಸ್ವೀಕೃತಿಯನ್ನು ಪಡೆಯಲು ಸಹ ಆದೇಶಿಸಲಾಗಿದೆ.

( 5) ಮುಂದುವರೆದು, ರಿಜಿಸ್ಟ್ರಿಯವರಿಗೆ ತೀರ್ಪಿನ ಪ್ರತಿಯನ್ನು ( i) ಎಲ್ಲಾ ನ್ಯಾಯಿಕ ಅಧಿಕಾರಿಗಳಿಗೆ;(ii) ನಿರ್ದೇಶಕರು ಮತ್ತು ಪೊಲೀಸ್ ಮಹಾನಿರೀಕ್ಷಕರಿಗೆ; ಮತ್ತು(iii) ವಿಧಿ ವಿಜ್ಞಾನ ಪ್ರಯೋಗಾಲಯದ (ಎಫ್.ಎಸ್.ಎಲ್.) ನ ನಿರ್ದೇಶಕರಿಗೆ ಕಳುಹಿಸುವುದಕ್ಕೆ ನಿರ್ದೇಶಿಸಲಾಗಿದೆ.ತನಿಖೆಯ ಕಾಲಾವಧಿಯಲ್ಲಿ ಪೊಲೀಸರು ಸಂಗ್ರಹಿಸಿದ ವಿದ್ಯುನ್ಮಾನ ಸಾಕ್ಷ್ಯಾಧಾರಗಳನ್ನು ಹೇಗೆ ಸಂರಕ್ಷಿಸಬೇಕೆಂಬುದು ಮತ್ತು ನ್ಯಾಯಾಲಯದ ಮುಂದೆ ಮೊಕದ್ದಮೆಯೂ ತಾರ್ಕಿಕವಾಗಿ ಅಂತ್ಯಗೊಳ್ಳುವವರೆಗೆ ದಾಖಲಿಸಿದ ಈ ವಿದ್ಯುನ್ಮಾನ ಸಾಕ್ಷ್ಯಾಧಾರಗಳನ್ನು ಸಂರಕ್ಷಿಸಿಟ್ಟುಕೊಳ್ಳಲು ಸಹ ನಿರ್ದೇಶಿಸುತ್ತದೆ.

( 6) ರಿಜಿಸ್ಟ್ರಿಗೆ ಈ ಮೂಲಕ ಈ ತೀರ್ಪಿನ ಪ್ರತಿಯನ್ನು ಇವರಿಗೆ ( 1) ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ; ಮತ್ತು ( 2) ಗೃಹ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಿಗೆ ಕಳುಹಿಸಲು

ನಿರ್ದೇಶಿಸಲಾಗಿದೆ.ಇದರೊ ೦ ದಿಗೆ ಮೊಕದ್ದಮೆಯು ತಾರ್ಕಿಕವಾಗಿ ಅಂತ್ಯಗೊಳ್ಳುವವರೆಗೂ ಅಪರಾಧದ ದೃಶ್ಯಗಳಿರುವ ವಿದ್ಯುನ್ಮಾನ ಸಾಕ್ಷ್ಯಾಧಾರಗಳನ್ನು (ಡಿಜಿಟಲ್ ಸಾಕ್ಷ್ಯಗಳು) ನಿರ್ವಹಿಸುವುದಕ್ಕೆ (ಮಾನದಂಡ ಕಾರ್ಯಾಚರಣೆ ಪ್ರಕ್ರಿಯೆ) (ಸ್ಟ್ಯಾಂಡರ್ಡ್ ಆಪರೇಟಿಂಗ್ ಪ್ರೋಸಿಜರ್ (ಎಸ್.ಒ.ಪಿ. )ಅನ್ನು ಅಭಿವೃದ್ಧಿಪಡಿಸುವುದಕ್ಕೆ ತರಬೇತಿಯನ್ನು ನಡೆಸುವ ಮೂಲಕ ಎಲ್ಲ ತನಿಖಾ ಏಜೆನ್ಸಿಗಳಿಗೆ ಅವುಗಳ ಕಾರ್ಯಕ್ಷಮತೆಯನ್ನು ಸಂವರ್ಧನೆಗೊಳಿಸುವುದಕ್ಕೆ ಯುಕ್ತ ಕ್ರಮವಾಗಿ ಮತ್ತು ಮುನ್ನೆಚ್ಚರಿಕೆ ಕ್ರಮವಾಗಿ ಈ ಮೇಲೆ ಉಲ್ಲೇಖಿಸಿದ ಮಾರ್ಗಸೂಚಿ ಸೂತ್ರಗಳನ್ನು ತನಿಖಾ ಏಜೆನ್ಸಿಗಳಿಗೆ ಕಳುಹಿಸಲು ಸಹ ರಿಜಿಸ್ಟ್ರಿಗೆ ನಿರ್ದೇಶಿಸಲಾಗಿದೆ.

ಈ ಸಂಬಂಧದಲ್ಲಿ, ಸಂಬಂಧಪಟ್ಟ ಎಲ್ಲ ನ್ಯಾಯಾಲಯಗಳು ಒಳಗೊಂಡಂತೆ ಸರ್ಕಾರವು ಪ್ರಾದೇಶಿಕ ಸೈಬರ್ ಪ್ರಯೋಗಾಲಯಗಳನ್ನು, ಸೈಬರ್ ತನಿಖಾ ರಿಟ್ಸಳನ್ನು ಒದಗಿಸುವುದಕ್ಕೆ, ಯುಕ್ತ ಮತ್ತು ಸುರಕ್ಷಿತವಾಗಿ ಸಾಧನಸಲಕರಣೆಗಳನ್ನು, ಮುಂತಾದವುಗಳನ್ನು ಸಂಗ್ರಹಿಸುವುದಕ್ಕೆ ಅಗತ್ಯವಾದಂಥ ಮೂಲ ಸೌಕರ್ಯಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರಕ್ಕೆ ನಿರ್ದೇಶಿಸಲಾಗಿದೆ.